# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru Tingalole Vol XXXIII - 7 July 2015

PAGES 16



**Dr. Manjunath's painting at Association**

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

# 'Krishnasya Daasosmyaham"













In Mysore Association, we witnessed the Birth Centenary celebration of Late Shri C. L. N. Iyengar. On 21st June 2015, at 11.00 a.m. a special programme of ''krishnasya Daasosmyaham'' a dance ballet by Nrithyodaya under guidance of Smt. Jayashree Rajagopalan and her troupe was conducted which coincided with International yoga day. We watched the entire programme, a dance ballet on Kanaka dasa and Purandar dasa and their life incidents thus celebrating International Yoga Day through Nritya Yoga.

The above photos depict some of the scenes of dance ballet. The Guru Smt. Jayashree Rajagopalan used the technique of narrating the story in English & actual dialogues in Kannada & the Kritis of Purandar Dasa & Kanaka Dasa to dance steps in enacting the ballet.

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email :

mysoreassociation.mumbai@gmail.com

Website :

www.mysoreassociation.in

*ಸಂಪಾದಕೀಯ*

# ನೇಸರು

## ತಿಂಗಳೋಲೆ

**ಸಂಪುಟ 33** **ಜುಲಾಯಿ 2015** **ಸಂಚಿಕೆ 7**

ಒಮ್ಮೆ ಋಷಿ ಮುನಿಗಳು ತಮ್ಮ ಶಿಷ್ಯಂದಿರಿಗೆ ಉಪದೇಶಿಸುತ್ತಾ, ಜೀವನದಲ್ಲಿ ಕದಿಯಲಾಗದ ವಸ್ತುವೊಂದಿದ್ದರೆ ಅದು ವಿದ್ಯೆ. ವಿದ್ಯೆಯೆನ್ನುವುದು ಹಣ ಕೊಟ್ಟು ಖರೀದಿಸುವ ಅಥವಾ ಮಾರಾಟ ಮಾಡುವ ಸೊತ್ತಲ್ಲ. ವಿದ್ಯೆ ನಮ್ಮಲ್ಲಿ ಸಂಸ್ಕಾರವನ್ನು ಬೆಳೆಸುತ್ತದೆ, ವಿನಯವನ್ನು ಬೆಳೆಸುತ್ತದೆ. ಹಾಗೇನೇ ನಿಜವಾದ ವಿದ್ಯೆ ಅಂದರೆ ಕಲಿತ ವಿದ್ಯೆಯನ್ನು ಕಾರ್ಯರೂಪಕ್ಕೆ ಇಳಿಸುವುದು ಎಂದು ನುಡಿದರು. ಆ ಕುಟೀರದಲ್ಲಿ ಅನೇಕ ರಾಜಮನೆತನದ ರಾಜಕುಮಾರರು ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು. ಆ ದಿನ ಬಂದೇ ಬಿಟ್ಟಿತು. ಎಲ್ಲ ರಾಜಕುಮಾರರು ಮುನಿಗಳು ಕಲಿಸಿದ ಎಲ್ಲ ವಿದ್ಯೆಗಳಲ್ಲಿ ಪ್ರಾವಿಣ್ಯತೆಯನ್ನು ಪಡೆದರು. ಸಂಪ್ರದಾಯದಂತೆ ರಾಜಕುಮಾರರು ಋಷಿ ಮುನಿಗಳಲ್ಲಿ ಗುರುದಕ್ಷಿಣೆಯ ರೂಪದಲ್ಲಿ ಏನನ್ನು ನೀಡಬೇಕೆಂದು ವಿನಂತಿಸಿಕೊಂಡರು. ಅದಕ್ಕೆ ಪ್ರಕ್ರಿಯಿಸುತ್ತಾ ಋಷಿಗಳು ನನಗೇನು ಬೇಡ, ನಾನು ಕಲಿಸಿದ ವಿದ್ಯೆಯನ್ನು ಒಳ್ಳೆಯ ಕಾರ್ಯಕ್ಕೆ ಬಳಸಿ, ಸತ್ಪಥದಲ್ಲಿ ಮುನ್ನೆಡೆದು ಕೀರ್ತಿ ಗಳಿಸಿರಿ. ನೀವಿನ್ನು ಹೊರಡಿ ನಿಮ್ಮ ಭವಿಷ್ಯ ಉಜ್ವಲವಾಗಲಿ ಎಂದು ಆಶೀರ್ವದಿಸಿ ರಾಜಕುಮಾರರನ್ನು ಬೀಳ್ಕೊಟ್ಟರು. ಕೊನೆಯಲ್ಲಿ ಸುಕಾಮ ಎನ್ನುವ ರಾಜಕುಮಾರನು ಗುರುಗಳಲ್ಲಿ ಬಂದು, ತನ್ನ ರಾಜ್ಯಕ್ಕೆ ಒಮ್ಮೆ ಭೇಟಿ ನೀಡಬೇಕೆಂದು ಆಹ್ವಾನಿಸಿದನು. ಗುರುಗಳು ಪ್ರೀತಿಯಿಂದ ಕಾಲ ಕೂಡಿ ಬಂದರೆ ಖಂಡಿತ ಬರುವೆ ಎಂದು ಹೇಳಿ ಕಳುಹಿಸಿದರು.

ದಿನಗಳು ಸರಿದವು. ಋಷಿ ಕುಮಾರನ ಪುತ್ರನನ್ನು ಒಬ್ಬ ದೈತ್ಯ ರಾಕ್ಷಸ ಅಪಹರಿಸುತ್ತಾನೆ. ರಾಕ್ಷಸನನ್ನು ತಡೆಯುವಲ್ಲಿ ವಿಫಲರಾದ ಋಷಿ ಮುನಿಗಳು ತಮ್ಮ ಶಿಷ್ಯಂದಿರ ಬಳಿ ಸಹಾಯಕ್ಕಾಗಿ ತೆರಳುತ್ತಾರೆ. ಆದರೆ ಯಾವ ಶಿಷ್ಯರೂ ಆ ರಾಕ್ಷಸನನ್ನು ಎದುರಿಸಲು ಸಿದ್ಧರಿರುವುದಿಲ್ಲ. ಎಲ್ಲರೂ ಏನಾದರೊಂದು ನೆಪವೊಡ್ಡಿ ಹಿಂದೆ ಸರಿಯುತ್ತಾರೆ. ಅದನ್ನು ಬಿಟ್ಟು ಬೇರೇನಾದರೂ ಕೇಳಿ ಎಂದು ವಿನಂತಿಸಿಕೊಳ್ಳುತ್ತಾರೆ. ಆದರೆ ಸುಕಾಮ ಮಾತ್ರ ಗುರುಗಳಿಗೆ ಧೈರ್ಯ ತುಂಬುತ್ತಾ, ಋಷಿ ಕುಮಾರರನ್ನು ಕರೆತರುವುದಾಗಿ ಭರವಸೆಯನ್ನಿತ್ತು ಹೊರಟ ನಿಂತನು. ಮಾತಿನಂತೆ ರಾಕ್ಷಸನನ್ನು ಸಂಹರಿಸಿ, ಋಷಿಕುಮಾರನನ್ನು ತಂದು ಗುರುಗಳಿಗೆ ಒಪ್ಪಿಸುವ ಮೂಲಕ ಗುರುದಕ್ಷಿಣೆಯನ್ನು ಸಲ್ಲಿಸಿದನು ಸುಕಾಮ. ಆಗ ಗುರುಗಳು ಹೇಳುತ್ತಾರೆ, ನಿಜವಾದ ಶಿಷ್ಯ ಅಂದರೆ ನೀನೇ, ಗುರುವಿನ ಕಷ್ಟಕಾಲದಲ್ಲಿ ಹಿಂದೆ ಮುಂದೆ ಯೋಚಿಸದೆ ಸಹಾಯ ಮಾಡಿದ್ದೀಯಾ, ನೀನು ಸಲ್ಲಿಸಿದ ಈ ಗುರುಕಾಣಿಕೆ ಯಾವತ್ತೂ ಮರೆಯಲಿಕ್ಕಿಲ್ಲ, ಅಮೂಲ್ಯವಾದುದು ಎಂದು ಭಾವುಕತೆಯಿಂದ ನುಡಿದರು. ಆಗ ಸುಕಾಮ ಹೇಳುತ್ತಾನೆ, ಹಸಿ ಮಣ್ಣಿನಂತಿರುವ ನಮ್ಮಂಥ ಮಕ್ಕಳನ್ನು ತಿದ್ದಿ ತೀಡಿ, ನಮಗೆ ಒಂದು ರೂಪ ಕೊಟ್ಟಿದ್ದೀರಿ. ನಿಮ್ಮಂಥ ಗುರುವಿನ ಸೇವೆಗೆ ನಾನು ಸದಾಸಿದ್ಧ. ನೀವು ಕಲಿಸಿದ ವಿದ್ಯೆ ನಿಮ್ಮ ಕೆಲಸಕ್ಕೆ ಬಾರದಿದ್ದರೆ ಹೇಗೆ? ಗುರುದಕ್ಷಿಣೆಯ ರೂಪದಲ್ಲಿ ತನ್ನ ಹೆಬ್ಬೆರಳನ್ನೆ ಕತ್ತರಿಸಿಕೊಟ್ಟ ಏಕಲವ್ಯನಂತವರನ್ನು ಈ ಇತಿಹಾಸ ಕಂಡಿದೆ. ಅಂತಹ ಮಹಾನ್ ಶಿಷ್ಯ ನಾನಲ್ಲದಿದ್ದರೂ, ಮಾನವೀಯತೆ ಎನ್ನುವಂಥದ್ದು ನನ್ನಲ್ಲಿದೆ ಎಂದು ಆತ್ಮವಿಶ್ವಾಸದಿಂದ ನುಡಿದನು. ಗುರುಗಳು ಮಾನವೀಯತೆಯನ್ನು ಮೆರೆದ ಶಿಷ್ಯನಿಗೆ ಧನ್ಯವಾದ ಅರ್ಪಿಸಿ, ಆತನನ್ನು ಆಶೀರ್ವದಿಸಿ ಮುಂದೆ ತೆರಳಿದರು. ಇಂದು ಗುರುವಿನ ಮುಖಾರವಿಂದದಲ್ಲಿ ಸಾರ್ಥಕತೆಯ ನೆರಳುಗಳು ನಲಿದಾಡಿದವು. ಶಿಷ್ಯನಿಗೆ ಇಂತಹ ಗುರು ಪಡೆದ ನಾನು ಧನ್ಯೋಸ್ಮಿ ಎಂದು ಬೀಗಿದನು.

ವಿದ್ಯೆಯಿಂದ ಮಾನವೀಯತೆ ಕೂಡ ಲಭಿಸುತ್ತದೆ. ಆದರೆ ಇಂದು ಮಾನವೀಯತೆಯ ಕೊರತೆ ಎಲ್ಲೆಡೆ ಎದ್ದು ಕಾಣುತ್ತದೆ. ಕಲಿತ ವಿದ್ಯೆಗೂ ಅನುಸರಿಸುತ್ತಿರುವ ನಡೆಗೂ ಅಜಗಜಾಂತರ ವ್ಯತ್ಯಾಸ. ಬಡವ–ಶ್ರೀಮಂತ ಎನ್ನುವ ಬೇಧಭಾವ ಮಾಡಬಾರದು, ಜಾತಿ ಮತಗಳೆಂಬ ಬೇಧಭಾವವಿಲ್ಲ. ಇರುವುದೊಂದೇ ಜಾತಿ, ಅದೇ ಮಾನವ ಜಾತಿ. ನಾವೆಲ್ಲ ಒಂದೇ ತಾಯಿಯ ಮಕ್ಕಳು....ಹೀಗೆ ಘಂಟಾ ಘೋಷವಾಗಿ ಕೂಗುತ್ತೇವೆ. ಆದರೆ ವಾಸ್ತವದಲ್ಲಿ ಆಗುತ್ತಿರುವುದು ಏನು? ಜೀವ ಎನ್ನೋದು ಎಲ್ಲರದ್ದು ಒಂದೇ. ಆದರೆ ಈಗ ನಾವು ಕಾಣುತ್ತಿರುವುದೇನು? ಅಲ್ಲಿಯೂ ಶ್ರೀಮಂತನ ಜೀವಕ್ಕೆ ಮೌಲ್ಯ ಜಾಸ್ತಿ. ಹಣದಿಂದ ಕೂಡಿದ ಅಧಿಕಾರದ ಮದ ಎಲ್ಲ ಕಡೆ ತಾಂಡವ ವಾಡುತ್ತಿದೆ. ಬಡವ ಶ್ರೀಮಂತನ ಜೀವದ ಪ್ರಶ್ನೆ ಬಂದಾಗ ನಮ್ಮ ಜನ ಮೊದಲು ಓಡುವುದು ಶ್ರೀಮಂತನ ಬಳಿ. ಅವನಿಗೆ ಏನಾಗಿದೆ ಅನ್ನೋ ನೋಡುವ ಕುತೂಹಲದಿಂದ. ಅದೇ ಸಾಯುತ್ತಿರುವ ವ್ಯಕ್ತಿಯನ್ನು ಮೊದಲು ಆಸ್ಪತ್ರೆಗೆ ದಾಖಲಿಸಬೇಕೆನ್ನುವ ಸಾಮಾನ್ಯ ಪ್ರಜ್ಞೆ ನಮ್ಮ ಜನರಿಲ್ಲ. ಇದೇನಾ ಮಾನವೀಯತೆ?

**– ಡಾ. ಜ್ಯೋತಿ ಸತೀಶ್**

# ಮುಂಬೈಕರ್ ಪಾರ್ಕ್

ಯಾವಾಗಲೂ ಮನೆಯಿಂದ ಹೊರ ಹೋಗುವಾಗ ಒಂದು ಪತ್ರಿಕೆಯನ್ನೋ ಅಥವಾ ಸಣ್ಣ ಪುಸ್ತಕವನ್ನೋ ನನ್ನ ಕೈಚೀಲದಲ್ಲಿರಿಸಿಕೊಳ್ಳುವುದು ನನ್ನ ವಾಡಿಕೆ. ಯಾಕೆ ಎಂದು ಹೇಳುವ ಅವಶ್ಯಕತೆ ಇಲ್ಲ ಅಲ್ಲವೇ? ಮುಂಬೈಯಲ್ಲಿ ಹೊರ ಬಿದ್ದರೆ ಬಸ್ಸು ಟ್ರೈನ್‌ಗಳಲ್ಲಿ ಪ್ರಯಾಣಿಸಿ ನಮ್ಮ ಕೆಲಸ ಮುಗಿಸಿಕೊಂಡು ಎಷ್ಟು ಹೊತ್ತಿಗೆ ಮನೆ ಸೇರುತ್ತೇವೆಂದು ಲೆಕ್ಕ ಹಾಕಲು ಯಾರಿಂದಲೂ ಸಾಧ್ಯವಿಲ್ಲ. ಹೀಗೆ ಹೊರ ಹೋದಾಗ ಬಸ್ಸು ಟ್ರೈನ್‌ಗಳಲ್ಲಿ ಪುಣ್ಯವಶಾತ್ ಕುಳಿತುಕೊಳ್ಳಲು ಜಾಗ ಸಿಕ್ಕಿದರೆ ಆಗ ನನ್ನ ಅಚೀಚೆನವರು ಅಥವಾ ಕಿಟಕಿಯಿಂದ ಹೊರ ನೋಡುತ್ತಾ ಸಮಯ ಕಳೆಯುವುದಕ್ಕಿಂತ ಯಾವುದಾದರೊಂದು ಲೇಖನ ಓದಿದರೆ ನನ್ನ ಜ್ಞಾನ ಸಾಮರ್ಥ್ಯ ಹೆಚ್ಚಾಗಬಹುದೇನೋ ಎಂಬ ಹುಸಿಯಾಸೆಯಿಂದ ಒಂದು ಪುಸ್ತಕ ಯಾವಾಗಲೂ ನನ್ನ ಜೋಳಿಗೆಯಲ್ಲಿರುತ್ತದೆ. ಅಂದು ಮನೆ ಬಿಡುವಾಗ ನನ್ನ ಕೈಗೆ ಸಿಕ್ಕಿದ ಹರಟೆಯ ಪುಸ್ತಕ ಎ.ಎನ್. ಮೂರ್ತಿರಾಯರ ಅಲೆಯುವ ಮನ.

ಆ ದಿನ ನನ್ನ ಅದೃಷ್ಟವೂ ಬಹಳ ಚೆನ್ನಾಗಿತ್ತು. ಥಾನಾ ಟ್ರೈನ್‌ನಲ್ಲಿ ಕುಳಿತುಕೊಳ್ಳಲು ಪ್ರಶಸ್ತವಾದ ಸ್ಥಳವೂ ಸಿಕ್ಕಿತು. ಸುತ್ತಮುತ್ತ ಯಾವ ಕಾಲೇಜು ಹುಡುಗಿಯರ ಗುಂಪೂ ಇರಲಿಲ್ಲ. ಅದ್ಯಾಕೆ ಹೀಕೆ ಹೇಳುತ್ತಿದ್ದೇನೆ ಎನ್ನುತ್ತೀರಾ? ನೀವು ಯಾವಾಗಲಾದರೂ ಈ ಕಾಲೇಜು ಹುಡುಗಿಯರ ಮಧ್ಯೆ ಕುಳಿತು ಪ್ರಯಾಣಿಸಿದ್ದೀರಾ? ಒಮ್ಮೆಯಾದರೂ ಪ್ರಯಾಣಿಸಿದ್ದರೆ ನೀವು ಈ ಪ್ರಶ್ನೆ ಕೇಳುವುದಿಲ್ಲ. ಈ ಹುಡುಗಿಯರ ಗುಂಪು ಕನಿಷ್ಠ ಮೂರು ಮಂದಿ ಇದ್ದರೂ ಸಾಕು, ಗರಿಷ್ಠ ಎಂಟು ಹತ್ತು ಮಂದಿಯಾದರೂ ಇರುತ್ತಾರೆ. ಇಂತಹ ಒಂದು ಗುಂಪು ನಿಮ್ಮ ಕಂಪಾರ್ಟ್‌ಮೆಂಟ್‌ನಲ್ಲಿದ್ದರೆ ಅವರ ಮಾತಿನ ವೈಖರಿ ಕಂಪಾರ್ಟ್‌ಮೆಂಟ್‌ನಲ್ಲಿರುವವರನ್ನೆಲ್ಲಾ ತಮ್ಮ ಕಡೆ ಆಕರ್ಷಿಸುತ್ತದೆ. ಇಡೀ ರೈಲು ತಮ್ಮದೇ ಎನ್ನುವಂತೆ ಜೋರಾಗಿ ಹರಟುತ್ತಾರೆ. ಹರಟೆಯ ವಿಷಯವೂ ಏನು ವೈವಿಧ್ಯಮಯ! ತಮ್ಮ ಓದಿನ ವಿಷಯವೊಂದನ್ನು ಬಿಟ್ಟು ಬಾಲಿವುಡ್, ಹಾಲಿವುಡ್, ಶಾಪಿಂಗ್, ತಮ್ಮ ಗೆಳೆಯ ಗೆಳತಿಯರ ಹೊಗಳಿಕೆ, ತೆಗಳಿಕೆ ಒಂದೇ ಎರಡೇ. ಅದರ ಮಧ್ಯೆ ಮಧ್ಯೆ ಜೋರಾದ ನಗುವಿನ ಅಲೆ. ಇಂತಹ ಒಂದು ಗುಂಪು ನಿಮ್ಮ ಬಳಿ ಕುಳಿತಿದ್ದರೆ ಪುಸ್ತಕವನ್ನು ಹೊರ ತೆಗೆಯುವ ಅವಶ್ಯಕತೆಯೇ ಇಲ್ಲ. ಆದರೆ ಆ ದಿನ ಅದೃಷ್ಟವಶಾತ್ ಯಾವ ಕಾಲೇಜಿನ ಗುಂಪೂ ನನ್ನ ಕಂಪಾರ್ಟ್‌ಮೆಂಟ್‌ನಲ್ಲಿರಲಿಲ್ಲ. ಹಾಗಾಗಿ ಟ್ರೈನ್ ಹೊರಡುತ್ತಲೇ ಅಲೆಯುವ ಮನ ಹೊರ ಬಂದು ಕುರ್ಲಾ ತಲುಪುವ ವರೆಗೆ 'ಕೆನ್ಸಿಂಗ್‌ಟನ್ ಪಾರ್ಕ್' ಹರಟೆ ಓದಿ ಮುಗಿಸಿದೆ.

ಮೂರ್ತಿರಾಯರೇ ನೀವು ಜನಸಂದಣಿ, ಬೀದಿಗಳಲ್ಲಿ ಗಲಾಟೆ ಎಲ್ಲಾ ನಿಮಗೆ ತುಂಬಾ ಇಷ್ಟ ಎಂದು ಬರೆದಿರುವಿರಿ. ನೀವು ಐದಾರು ದಶಕ ಬೇಗ ಹುಟ್ಟಿದಿರಿ. ನೀವು ಈಗಿನ ಬೆಂಗಳೂರು, ಮುಂಬೈ ಪಟ್ಟಣವನ್ನು ಕಂಡಿದ್ದರೆ ಬಹಳ ಸಂತೋಷ ಪಡುತ್ತಿದ್ದೀರಿ. ಮೊದಲನೆಯದಾಗಿ ಪಾರ್ಕಿನ ಬಗ್ಗೆ ಹೇಳುತ್ತೇನೆ ಕೇಳಿ. ನಿಮ್ಮ ಕೆನ್ಸಿಂಗ್‌ಟನ್ ಪಾರ್ಕಿನಲ್ಲಿ ಜನರ ಅಭಾವ, ಹಸಿರೂ ಇಲ್ಲ ಹೂವೂ ಇಲ್ಲ ಎಂದಿದ್ದೀರಿ. ಈಗಿನ ಪಾರ್ಕ್‌ನಲ್ಲೂ ಹಸಿರು ಹೂವು ಇಲ್ಲದಿರಬಹುದು. ಆದರೆ ಜನ ! ಬೆಳಿಗ್ಗೆ ಐದು ಗಂಟೆಗೇ ಹೋಗಿ, ಪಾರ್ಕ್ ತುಂಬಾ ಜನ. ಒಳ್ಳೆ ಟ್ರ್ಯಾಕ್ ಪ್ಯಾಂಟ್, ಜಾಕೆಟ್, ಶೂಸ್ ಹಾಕಿಕೊಂಡು ಜಾಗಿಂಗ್ ಮಾಡಲು ಬಂದಿರುವವರು, ಗರಿಗರಿಯಾದ ಬಿಳಿ ಪೈಜಾಮ ಜುಬ್ಬ ಹಾಕಿಕೊಂಡು ವಾಕಿಂಗ್ ಮಾಡಲು ಬಂದಿರುವ ರಿಟೈರಾದ ವಯಸ್ಕರು, ಮೈ ಕರಗಿಸಲು ವಾಕಿಂಗ್‌ಗೆ ಬಂದಿರುವ ಮಹಿಳೆಯರು, ಮತ್ತೊಂದು ಮೂಲೆಯಲ್ಲಿ ಅಹ್ಹಾಹ್ಹಾ - ಒಹ್ಹೋಹ್ಹೊ ಎಂದು ಅಟ್ಟಹಾಸ ಹಾಕುತ್ತಾ ಕೈ ಮೇಲೆ ಕೆಳಗೆ ಬೀಸುತ್ತಾ ವ್ಯಾಯಾಮ ಮಾಡುತ್ತಿರುವ 'ನಗುವವರ ಗುಂಪು' ಹೀಗೆ ಬೆಳಿಗ್ಗೆ ಐದು ಗಂಟೆಯಿಂದ ಎಂಟು ಗಂಟೆಯವರೆಗೆ ಈ ಎಲ್ಲಾ ಮಹನೀಯರನ್ನು ನೀವು ಕಾಣುತ್ತೀರಿ. ಇವರುಗಳೆಲ್ಲಾ ಹೊರಗೆ ಹೊರಡುವ ವೇಳೆಗೆ ಬಾಗಿಲ ಬಳಿ ನಿಮಗೆ ಹಾಗಲ ರಸ, ಬೇವಿನ ರಸ, ಬೆಂಡೆ ರಸ, ತೊಂಡೆ ರಸ, ತುಳಸೀ ರಸ ಮಾರುವ ಮಂದಿ ಸಿಗುತ್ತಾರೆ. ಸುಮಾರು ನಾಲ್ಕೈದು ಬಕೆಟ್‌ಗಳಲ್ಲಿ ಎಲ್ಲಾ ಕಹಿ ರಸ, ಹುಳಿ ರಸ, ಲೋಳೆ ರಸಗಳು ಈ ಮೊದಲನೆಯ ಗುಂಪು ಮನೆಗೆ ಹೋಗುವುದರೊಳಗೆ ಪೂರಾ ಖಾಲಿ. ಯಾಕೆಂದರೆ ನಿಮ್ಮ ಗಂಟಲು ನೋವಿಗೆ, ಮಧುಮೇಹಕ್ಕೆ, ಹೈ ಪ್ರೆಶರಿಗೆ ಎಲ್ಲಾ ಈ ರಸಗಳು ದಿವ್ಯ ಬಾಣವಂತೆ. ಅಂತೂ ನೀರು ಸೊಪ್ಪಿನ ಬಂಡವಾಳದಿಂದ ತಮ್ಮ ಜೇಬು ತುಂಬಿಸಿಕೊಳ್ಳುವ ಈ ಮಹನೀಯರು ಯಾವ ಬಿ ಸ್ಕೂಲಿನಿಂದ ಎಮ್.ಬಿ.ಎ. ಮಾಡಿದಿದ್ದಾರೋ ಗೊತ್ತಿಲ್ಲ.

ಕೆಲವರು ಸಂಸಾರ ಸಮೇತ ಬೆಳಗ್ಗಿನ ವಾಕಿಂಗ್‌ಗೆ ಬರುವುದೂ ಉಂಟು. ಇವರೆಲ್ಲರೂ ಗುಂಡುಗುಂಡಗೆ ಮರಿ ಆನೆಗಳಂತೆ ಹರಟುತ್ತಾ ನಡೆದಿರುತ್ತಾರೆ. ತಾವೆಲ್ಲಾ ಮೈ ಕರಗಿಸಿಕೊಳ್ಳಬೇಕೆಂಬ ಹಂಬಲದಿಂದ ಬರುವ ಸುಖಿ ಸಂಸಾರಗಳವರು ಇವರು. ಕಾಟಾಚಾರಕ್ಕೆ ಅರ್ಧ ಮುಕ್ಕಾಲು ಗಂಟೆ ಪಾರ್ಕಿನಲ್ಲಿ ಸುತ್ತಾಡಿ ನಂತರ ಪಾರ್ಕಿನ ಹೊರಗಿರುವ ಶಿವ ಪ್ರಸಾದದಲ್ಲೋ, ಅಂಭಾ ಭವನದಲ್ಲೋ ಹೊಟ್ಟೆ ತುಂಬಾ ತಿಂಡಿ ತಿಂದು ಮನೆಗೆ ಮರಳುತ್ತಾರೆ.

ನಂತರ ಪಾರ್ಕನ್ನು ತುಂಬುತ್ತಾರೆ ನಮ್ಮ ಕ್ರಿಕೆಟ್ ಮಂದಿ. ಗಣೇಶ ಮಂಡಳಿಯ ಒಂದು ಗುಂಪು, ಸಾಯಿ ಮಂಡಲಿಯ ಮತ್ತೊಂದು ಗುಂಪು, ಸಚಿನ್ ಕ್ರಿಕೆಟ್ ಅಸೋಸಿಯೇಷನ್, ಗವಾಸ್ಕರ್ ಗ್ರೂಪ್ ಹೀಗೆ ಐದಾರು ತಂಡದವರು ಚೆಂಡು ದಂಡು ಹಿಡಿದು ಶುಭ್ರವಾದ ಬಿಳಿ ಪ್ಯಾಂಟ್ ಟೀ ಶರ್ಟ್ ಧರಿಸಿ ಬಂದು ಶ್ರದ್ದೆಯಿಂದ ಆಡುತ್ತಾರೆ. ಎಲ್ಲರ ಕಣ್ಣಲ್ಲೂ ಮುಂದೊಂದು ದಿನ ವಾಂಖಡೆಯಲ್ಲೋ ಚಿನ್ನ ಸ್ವಾಮಿಯಲ್ಲೋ ಬ್ಯಾಟ್ ಬೀಸುವ ಕನಸು. ಫುಟ್‌ಬಾಲ್ ಅಥವಾ ಹಾಕಿ ಆಡುವ ತಂಡಗಳು ಇಡೀ ಪಾರ್ಕಿನಲ್ಲಿ ಕಾಣಸಿಗುವುದಿಲ್ಲ. ಅದಕ್ಕೆ ಕಾರಣ ಗೊತ್ತೇ ಇದೆಯಲ್ಲವೇ? ಕ್ರಿಕೆಟ್‌ನಲ್ಲಿ ಸುರಿಯುವ ಝಣಝಣ ಹಣ ಇನ್ಯಾವ ಕ್ರೀಡೆಯಲ್ಲಿದೆ ಸ್ವಾಮಿ? ಸಾಕಷ್ಟು ಬೆವರು ಸುರಿಸಿ ಪ್ಯಾಂಟ್ ಶರ್ಟ್‌ಗಳನ್ನೆಲ್ಲಾ ಮಣ್ಣಿನ ಮುದ್ದೆ ಮಾಡಿಕೊಂಡು ಸುಮಾರು ಹತ್ತು ಗಂಟೆಯ ಹೊತ್ತಿಗೆ ಈ ಗುಂಪುಗಳೆಲ್ಲಾ ಹೊರ ನಡೆಯುತ್ತಾರೆ.

ಹತ್ತು ಗಂಟೆಯ ನಂತರ ಸಂಜೆ ನಾಲ್ಕು ಐದರ ತನಕ ಪಾರ್ಕಿನ ದೃಶ್ಯ ಬಹಳ ಶೃಂಗಾರಮಯ. ಹೆಚ್ಚಾಗಿ ಕಾಲೇಜಿನ ಯುವಕ ಯುವತಿಯರು ಜೊತೆಜೊತೆಯಾಗಿ ಬಂದು ಕೈಯಲ್ಲಿ ಒಂದೊಂದು ಬಿಂಗೋ, ಲೇಸ್ ಚಿಪ್ಸ್ ಪ್ಯಾಕೆಟ್ ಹಿಡಿದು ಕಾಲೇಜಿನ ಪುಸ್ತಕದ ಚೀಲವನ್ನು ಪಕ್ಕದಲ್ಲಿ ಸುರಕ್ಷಿತವಾಗಿರಿಸಿ ಒಬ್ಬರ ಕಣ್ಣಲ್ಲಿ ಮತ್ತೊಬ್ಬರ ಕಣ್ಣು ಸೇರಿಸಿ ಚಿಪ್ಸ್ ಮೆಲ್ಲುತ್ತಾ ತಮ್ಮ ಸರಸ ಸಂಭಾಷಣೆಯಲ್ಲಿ ಮಗ್ನರಾಗಿರುತ್ತಾರೆ. ಬಿಸಿಲಿರಲಿ, ಮಳೆಯಿರಲಿ ವರ್ಷದ ಹನ್ನೆರಡು ತಿಂಗಳೂ ಈ ಜೋಡಿಗಳು ಕಾಣ ಸಿಗುತ್ತಾರೆ. ಬೆಳಿಗ್ಗೆ ಬರುವ ಎರಡು ಗುಂಪುಗಳಿಗೆ ಸಮಯದ ಬಗ್ಗೆ ಬಹಳ ಕಾಳಜಿ. ವಾಕಿಂಗ್ ಜಾಗಿಂಗ್‌ನವರು ಎಂಟರ ನಂತರ ಕಾಣ ಸಿಗುವುದಿಲ್ಲ. ಕ್ರಿಕೆಟ್ ಗುಂಪು ಎರಡು ಗಂಟೆಯ ಆಟದಲ್ಲಿ ಸೋತು ಸುಣ್ಣವಾಗುತ್ತಾರೆ. ಆದರೆ ಈ ಮೂರನೆಯ ಗುಂಪಿಗೆ ಸಮಯದ ಪರಿವೆಯೇ ಇಲ್ಲ. ಎಷ್ಟು ಹೊತ್ತಿಗೆ ಮನೆಗೆ ಹೋದರೂ ಹೇಳಲು ಬೇಕಾದಷ್ಟು ನೆವಗಳಿರುತ್ತವೆ. ಕಾಲೇಜಿನಲ್ಲಿ ಎಕ್ಸ್‌ಟ್ರಾ ಲೆಕ್ಚರ್ ಬಗ್ಗೆ ಹೇಳಿ ಮನೆಯವರ ಬಾಯಿ ಮುಚ್ಚಿಸುತ್ತಾರೆ. ಪ್ರತಿದಿನವೂ ಅದೇ ಜೋಡಿಗಳು ಬರುತ್ತವೆ ಎಂದೇನಿಲ್ಲ. ಯಾವಾಗಲೂ ಒಂದೇ ಪಾರ್ಕಿಗೆ ಹೋದರೆ ಅವರಿಗೂ ಬೇಸರವಾಗುವುದಿಲ್ಲವೇ? ಅದರಲ್ಲೂ ನಾವೀನ್ಯತೆ

ಬೇಕು. ಇವತ್ತು ಶಿವಾಜಿ ಪಾರ್ಕ್, ನಾಳೆ ನೆಹರೂ ಪಾರ್ಕ್, ನಾಡಿದ್ದು ಶಾಸ್ತ್ರೀ ಪಾರ್ಕ್. ಈಗೇನು ಪಾರ್ಕ್‌ಗಳಿಗೆ ಬರವೇ? ಬೆಳಿಗ್ಗೆ ಎದ್ದು ಗಡಿಬಿಡಿಯಿಂದ ತಿಂಡಿ ಮಾಡಿ ಅದನ್ನು ಡಬ್ಬಿಯಲ್ಲಿ ತುಂಬಿಸಿ ಅದರ ಜೊತೆಗೇ ಸ್ವಲ್ಪ ಪಾಕೆಟ್ ಮನಿಯನ್ನೂ ಕೊಟ್ಟು ಪ್ರೀತಿಯಿಂದ ಕಾಲೇಜಿಗೆ ಕಳಿಸಿ ಕೊಡುತ್ತಾರೆ ಇವರ ತಾಯಂದಿರು. ಕಾಲೇಜೆಂಬ ನಾಲ್ಕು ಗೋಡೆಯ ಮುಚ್ಚಿದ ವಾತಾವರಣದಲ್ಲಿ ಕಲಿಯುವುದಕ್ಕಿಂತ ಪಾರ್ಕ್ ಎಂಬ ಮುಕ್ತ ವಿದ್ಯಾಲಯದಲ್ಲಿ ಕಲಿಯಲು ಬೇಕಷ್ಟಿದೆಯೆಂದು ಮನವರಿಕೆಯಾದ ಈ ಜೋಡಿಗಳು ಸಂಜೆಯವರೆಗೆ ತಮ್ಮ ಪಾಠ ಮುಗಿಸಿ ಮನಸ್ಸಿಲ್ಲದ ಮನಸ್ಸಿನಿಂದ ಹೊರ ಹೊರಡುತ್ತಾರೆ. ಇದಲ್ಲದೆ ಮುಂಬೈಯ ಕಿಷ್ಕಿಂಧೆಯಂತಹ ಮನೆಯಲ್ಲಿ ಕಾಲು ನೀಡಿ ಆರಾಮವಾಗಿ ಮಲಗಲು ಜಾಗ ಇಲ್ಲದವರು ಮಧ್ಯಾಹ್ನದ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಲು ಬರುವವರಿದ್ದಾರೆ. ಯಾವುದಾದರೂ ಮರದ ಕೆಳಗೆ ಭೂದೇವಿಯ ಮಡಿಲಲ್ಲಿ ಅದೇ ಹಂಸತೂಲಿಕಾಕಲ್ಪವೆಂಬಂತೆ ಪವಡಿಸಿ ನಿದ್ರಾವಶರಾಗಿರುತ್ತಾರೆ. ಮೂರು ನಾಲ್ಕು ಗಂಟೆ ಗಡದ್ದು ನಿದ್ದೆ ಮುಗಿಸಿ ಸಂಜೆಯ ಚಾ ಹೀರಲು ಮನೆಯತ್ತ ನಡೆಯುತ್ತಾರೆ.

ಇನ್ನು ಸಂಜೆಯ ದೃಶ್ಯ. ಮೂರ್ತಿರಾಯರೇ ಇದು ನಿಮ್ಮ ಕಾಲದಲ್ಲಿ ನೀವು ನೋಡುತ್ತಿದ್ದ ದೃಶ್ಯಕ್ಕೂ ಈಗಿಗೂ ಹೆಚ್ಚೇನು ವ್ಯತ್ಯಾಸವಿರಲಾರದು. ಆಟ ಆಡಲು ಬರುವ ಸಣ್ಣ ಹುಡುಗರ ಗುಂಪು, ಮೊಮ್ಮಕ್ಕಳನ್ನು ಕರೆದುಕೊಂಡು ಬರುವ ಅಜ್ಜ-ಅಜ್ಜಿಯಂದಿರು. ಆದರೆ ಇತ್ತೀಚೆಗೆ ಅಜ್ಜ-ಅಜ್ಜಿಯರಿಗಿಂತ ಹೆಚ್ಚಾಗಿ ಆಯಾ ಮತ್ತು 'ಗವರ್ನೆಸ್' ಅವರು ಈ ಪುಟ್ಟ ಮಕ್ಕಳನ್ನು ಗಾಡಿಯಲ್ಲಿ ತಳ್ಳಿಕೊಂಡು ಬರುವುದು ಹೆಚ್ಚಾಗಿ ಕಾಣುತ್ತದೆ. ಈ ಹೊತ್ತಿನಲ್ಲಿ ಪಾರ್ಕಿನ ಒಳಗೂ ಹೊರಗೂ ಬಿಸಿಬಿಸಿ ಕಡಲೆ ಕಾಯಿ ಮಾರುವವರು, ಬೇಲ್‌ಪೂರಿಯಿವರು, ಗೋಲಾದವರು ನಿಮ್ಮ ಸೇವೆ ಮಾಡಲು ಸಿದ್ಧರಾಗಿರುತ್ತಾರೆ. ಪಾರ್ಕಿಗೆ ಬರುವ ಮಕ್ಕಳಿಗೆ ಮುಖ್ಯಾಕರ್ಷಣೆ ಈ ಉದರ ಪೂಜೆ. ಸುಮಾರು ಏಳು ಗಂಟೆಯ ಹೊತ್ತಿಗೆ ಪಾರ್ಕಿ ಜನ ಸಂದಣಿ ಕರಗುತ್ತಾ ಬರುತ್ತದೆ. ನಂತರ ಮನೆಗೆ ಹೋಗಿ ಮಕ್ಕಳಿಗೆ ಹೋಮ್ ವರ್ಕ್ ಮಾಡಬೇಕು. ಟಿ.ವಿ.ಯಲ್ಲಿ ಶುರುವಾಗುವ 'ಸಾಸ್ ಬಹು' ಧಾರವಾಹಿಗಳು ಪ್ರಸಾರವಾಗುವ ಮೊದಲು ಮನೆ ಸೇರಬೇಕು. ಏಳು ಗಂಟೆಯ ನಂತರ ಪಾರ್ಕಿನ ಪರಿಸ್ಥಿತಿ ಏನೆಂದು ನನಗೆ ಅಂದಾಜಿಲ್ಲ. ಆದರೆ ನಿಮ್ಮ ಕಾಲದಲ್ಲಿದ್ದಂತೆ ಪಾರ್ಕಿನ ಲೈಟಿನಡಿಯಲ್ಲಿ ಕುಳಿತು ಓದುವ ವಿದ್ಯಾರ್ಥಿಗಳಂತೂ ಖಂಡಿತವಾಗಿಯೂ ಕಾಣ ಸಿಗುವುದಿಲ್ಲ. ಒಟ್ಟಿನಲ್ಲಿ ಈಗಿನ ಪಾರ್ಕ್‌ಗಳು ಕೆನ್ಸಿಂಗ್ಟನ್ ಪಾರ್ಕಿನಂತೆ ನೀರಸ ಜಾಗವಂತೂ ಅಲ್ಲ, ಬರೆಯಬೇಕಾದರೆ ದಿನವೂ ಒಂದೊಂದು ಹೊಸ ಕತೆ ಸಿಗುತ್ತದೆ.

– **ರಮಾ ಉಡುಪ**

# OBITUARY



**Smt. Ratna Swami Rao**

Smt. Ratna Swami Rao passed away peacefully at the ripe age of 92 years in her residence in Bengaluru on July 4, 2015. She was mother of our member Smt. Uma Prabhakar Rao and 2 more sons, Ajith and Sudhir.

Smt. Ratna Swami Rao was born in Bengaluru to illustrious parents, Prof. L. Rama Rao and Smt. Seetabai. She graduated in Physics(Hons.) from Central College, Bengaluru. She was a goldmedalist throughout. She also had her Rashtrabhasha Visharada Degree in Hidi. After marriage to Dr. C. N. Swami Rao, she shifted to Tumkur. she was a dedicated Social Worker and revived the defunct Mahila Samaja. She also worked in the field of Adult Education for Women for which she received the Gargi Prashasti from Shashvati, NMKRV College, Bengaluru.


Smt. Ratna Swami Rao was a very warm and unassuming person who guided a lot of women in distress to light and happiness.

The Mysore Association pays its tributes to the departed soul and heartfelt condolences to the bereaved family.

## Steamed Vegetable Chana Dal Wada

*(II Prize winning entry in cooking competition held at Mysore Association, on 14th March 2015 in Savoury section)*


**Ingredients:**



Chana Dal – 2 Cups
Tur dal – ½ cup
Methi seeds – 1 small spoon
Carrot – 1 big
Spinach- finely chopped ½ cup
Coriander – a few leaves
Salt and chilli powder to taste

**Method :** Soak chana dal and Tur dal for 8 hrs. Grind chana dal and tur dal together. Grate carrot and grind in a mixer. Make paste of spinach and coriander. Mix one portion of dal with carrot. It gives red colour. Mix some portion of dal with spinach and coriander paste. It will give green colour. In pressure cooker add water. Grease plate. Now add green colour paste. Above that original dal paste and then red one. Pressure cook for 10 min. without vent. Cut into pieces. Serve with chutney or tomato sauce.

**- Mrs. Veena Joshi**



## NKES - HSC & SSC RESULTS

This year also NKES Junior College secured 100% results in HSC Board Exams in Commerce. In SSC Board results Kannada Medium secured 100% while English Medium secured 98% results.

We congratulate all the successfull students & wish them a bright future.

# ಮಡದಿಗೆ ಪ್ರೇಮ ಪತ್ರ

ಪ್ರಿಯೆ,

ನನಗೆ ಗೊತ್ತು ನೀನು ಹುಬ್ಬೇರಿಸುವೆಯೆಂದು. 30 ಚೈತ್ರಗಳನ್ನು ಒಟ್ಟಾಗಿ ಕಳೆದಿದ್ದೇವೆ, ಈಗ ಹೀಗೆ ಹೇಳುವದೆಂದರೆ,ನಿನಗೆ ಅಚ್ಚರಿಯಾದರೆ ಆಶ್ಚರ್ಯವಲ್ಲ. ನಮ್ಮ ಮದುವೆಯಾದ ಹೊಸತರಲ್ಲಿ,ಚಿನ್ನ ರನ್ನ ಎಂದು ನಿನ್ನನ್ನು ಕರೆದಿರಲಿಲ್ಲವೇ? ಹರಿಣಿಯಂತಹ ಕಣ್ಣು, ಹವಳದಂತ ತುಟಿ,ಸಂಪಿಗೆ ಎಸಳಂತೆ ನಾಸಿಕ, ಶಶಿವದನೆ ರಂಭೆ ಹೀಗೆಲ್ಲಾ ಹೇಳುತ್ತಿದ್ದೆನಲ್ಲ ಆಗ ನಿನಗೊಂದೂ ಇಷ್ಟವಾಗುತ್ತಿರಲಿಲ್ಲ. ಕಾಲಾಂತರದಲ್ಲಿ ಹಾಳಾಗಿ ಹೋಗುವ, ಕರಗುವ, ಸೊರಗುವ ದೇಹ ಸೌಂದರ್ಯವನ್ನು ಅದೇನು ಮೆಚ್ಚಿಕೊಳ್ಳುತ್ತೀರಿ ಎಂದು ನೀನು ಅನೇಕ ಸಾರೆ ಕೇಳಿದ್ದೆ. ಆ ಕಣ್ಣುಗಳ ಹಿಂದಿದ್ದ ಭಾವವನ್ನು ನಾನೆಂದೂ ಅರ್ಥಮಾಡಿಕೊಂಡಿರಲಿಲ್ಲ.

ನನ್ನ ತಾಯಿ ಬಿದ್ದು ಕಾಲು ಮುರಿದುಕೊಂಡಾಗ ನೀನು ಕೆಲಸ ಬಿಟ್ಟು ಆಕೆಯ ಆರೈಕೆಗೆ ನಿಂತೆ. ಅದು ನಿನ್ನ ಕರ್ತವ್ಯವೆಂದು ತಿಳಿದಿದ್ದೆ ನಾನು. ಅದೇನೂ ಅಷ್ಟು ಮಹತ್ತರ ಸಂಗತಿ ಎನಿಸಿರಲಿಲ್ಲ. ಮತ್ಯಾವುದಾದರೂ ಒತ್ತಡಕ್ಕೆ ನೀನು ಒಳಗಾಗಿರಬಹುದೆಂದುಕೊಂಡಿದ್ದೆ. ಅದೆಲ್ಲ ಈಗೇಕೆ ಹೋಗಲಿ ಬಿಡಿ ಎಂದು ನೀನು ಹೇಳಬಹುದು. ಮತ್ತೊಬ್ಬರನ್ನು ನೋಡುವ ನಿನ್ನ ದಯಾರ್ದ್ರ ದೃಷ್ಟಿ ನನಗೆ ನಿನ್ನೆ ಅರ್ಥವಾಯಿತು. ಗುಲಾಬಿ ಗಿಡದ ಕುಂಡದಲ್ಲಿ ಬಂದು ಕುಳಿತ ಗುಬ್ಬಿ ಕೇಳಿದ ಮೇಲೆ. ಅದೇನೆಂದಿತು ಗೊತ್ತೆ? 'ದಿನಾಲೂ ಅನ್ನ ಹಾಕುತ್ತಿದ್ದ ಅಮ್ಮ ಎಲ್ಲಿ?' ನೀನು ಗುಬ್ಬಿಗೆ ಅಕ್ಕಿ ಹಾಕುತ್ತಿದ್ದುದನ್ನು ಕೆಲ ಬಾರಿ ನಾನು ನೋಡಿದ್ದೆ. ಹುಳು ಹಿಡಿದಿದ್ದುದನ್ನು ಒಗೆಯುತ್ತಿರಬಹುದೆಂದು ತಿಳಿದಿದ್ದೆ. ದಿನಾಲೂ ಒಳ್ಳೆ ಅಕ್ಕಿಯನ್ನು ಹಾಕುತ್ತಿದ್ದೆ ಎನ್ನುವದು ನನ್ನ ಗಮನಕ್ಕೆ ಬಂದಿರಲಿಲ್ಲ.

ನಿಜವಾಗಿ ನನ್ನೊಂದಿಗೆ ಮಾತಾಡಿತದು. ನನಗೆ ನೀನು ಏನೂ ಹೇಳಿ ಹೋಗಲಿಲ್ಲ. ಯಾವುದಕ್ಕೂ ನನಗೆ ಬಲವಂತ ಮಾಡಿದವಳಲ್ಲ ನೀನು. ನಿನ್ನ ಉದಾರತೆಯನ್ನು ಹೃದಯ ವೈಶಾಲ್ಯವನ್ನು ಆ ಪಕ್ಷಿ ತಿಳಿಸಿತು. ನಿನ್ನ ಸಮಗ್ರ ವ್ಯಕಿತ್ವ ಕಣ್ಣೆದರು ಬಿಚ್ಚಿಕೊಂಡಿತು. ಅದಕ್ಕೆ ನಿನಗೊಂದು ಪತ್ರ ಬರೆಯಬೇಕೆನಿಸಿತು. ಬೇಸಿಗೆಯಲ್ಲಿ ಹಕ್ಕಿಗಳಿಗಾಗಿ ನೀರನ್ನು ಇಡುತ್ತಿದ್ದೆಯಲ್ಲವೇ, ನಿನ್ನ ಕಾರ್ಯವನ್ನು ನಾನು ಅನುಸರಿಸುತ್ತಿದ್ದೇನೆ. ಅಪ್ಪ ಪತ್ರ ಯಾಕೆ ಬರೆದರು ಇ-ಮೇಲ್ ಇರುವಾಗ ಅಂದಾಳು ಮಗಳು. ಅದರಲ್ಲಿ ಹೃದಯಕ್ಕೆ ಹೃದಯ ಸ್ಪಂದಿಸುವದಿಲ್ಲ. ನನ್ನ ಧ್ವನಿ ನಿನಗೆ ನಿನ್ನ ಧ್ವನಿ ನನಗೆ ಕೇಳುವದಿಲ್ಲ. ಯಾವದೋ ಅಜ್ಞಾತ ಜಗತ್ತಿನಲ್ಲಿ ಕಳೆದುಹೋದಂತೆನಿಸುತ್ತದೆ. ಪತ್ರವಾದರೆ ನನ್ನೊಳಗೆ ನೀನು ನಿನ್ನೊಳಗೆ ನಾನು ಸೆರೆಯಾದಂತೆನಿಸುವದಿಲ್ಲವೇ, ನಾವಿಬ್ಬರೂ ಮನದಲ್ಲಿ ವಿಚಾರದಲ್ಲಿ ಒಂದಾಗಿ ದ್ವೈತವನ್ನು ಅಳಿಯುತ್ತೇವೆ. ಸಾರ್ಥಕತೆಯನ್ನು ಪಡೆಯುತ್ತೇವೆ.

ನಿನ್ನ ಕೆಲ ಚಟುವಟಿಕೆಗಳನ್ನು ನಾನು ನೋಡುತ್ತಿದ್ದೆ. ನಾವೊಮ್ಮೆ ಮನೆಗೆ ಬರುತ್ತಿದ್ದಾಗ ತರಕಾರಿಗಳೆಲ್ಲಾ ದಾರಿಯಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಿನಗೆ ಪರಿಚಿತನಾದ ಸೌತೆಕಾಯಿ ಮಾರುವ ಮನಹರನ್ನು ಕೇಳಿದೆ. ಮುನ್ಸಿಪಾಲ್ಟಿ ಎಂದನಾತ. ಬಿದ್ದ ಸೌತೆಗಳನ್ನೆತ್ತಿ ಅವನ ಬುಟ್ಟಿಯಲ್ಲಿ ತುಂಬಿಸಿದೆ. ಅವನು ಓಡಿ ಬಂದ. ಬೇಡ ಬಿಡಿ ಆಂಟಿ ನಮ್ಮ ಜೀವನ ಹೀಗೇ ಹೋಗೋದು ಅಂದ. ಬುಟ್ಟಿಯನ್ನೆತ್ತಿಕೊಂಡು ಅಲ್ಲಿಂದ ದಡಬಡನೆ ಹೋದ. ಕೆಲ ಸೌತೆ ಗಟಾರದಲ್ಲಿಯೂ ಬಿದ್ದಿದ್ದವು. ನೀನು ಕಳವಳಗೊಂಡೆ. ಸರಕಾರದ ಎದುರು ಸಾಮಾನ್ಯನೊಬ್ಬ ಏನಾಗಿ ಹೋಗುತ್ತಾನೆ ಎಂದು ಉಸಿರು ಹಾಕಿದೆ. ನಿನ್ನ ಹೃದಯ ಸುಂದರವಾಗಿತ್ತು ನನಗದು ಕಂಡಿರಲಿಲ್ಲ. ವರ್ತಮಾನ ಪತ್ರಗಳಲ್ಲಿ ಸಹಾಯ ಮಾಡಿ ಜೀವ ಉಳಿಸಿ ಎನ್ನುವ ಸುದ್ದಿಗಳನ್ನು ಓದಿ ನನಗೆ ತಿಳಿದಂತೆ ಅಲ್ಪ ಸ್ವಲ್ಪ ಧನಸಹಾಯ ಮಾಡುತ್ತಿದ್ದೆ ನೀನು. ಇತರರ ನೋವನ್ನು ಕಾಣುವ ಅದಕ್ಕೆ ಪ್ರತಿಕ್ರಿಯಿಸುವ ಒಳಗಣ್ಣು ನಿನಗಿದೆ. ಅಂತೆಯೇ ನಿನ್ನ ಕಣ್ಣುಗಳು ಸುಂದರ.

ಅನ್ಯ ಜೀವಿಗಳ ಹಸಿವೆ ತೃಷೆಗಳನ್ನು ಅರಿವ ಭಾವ ನಿನಗಿದೆ. ಅಂತೆಯೇ ನಿನ್ನ ಮುಖ ಚೆಲ್ವಾಗಿದೆ. ಮಲ್ಲಿಗೆ ಸೇವಂತಿಗೆಗಳೂ ನಿನ್ನನ್ನು ಕಾಯುತ್ತಿರಬಹುದು. ದಿನಾಲೂ ಅವುಗಳೊಂದಿಗೆ ಮಾತಾಡು ತ್ತಿದ್ದೆಯೇನೋ ಸಂಜೆಯಾಗುವಾಗ ನಸು ನಲುಗಿರುತ್ತವೆ. ನೀರು ಹಾಕುತ್ತೇನೆ ಆದರೆ ಮಾತಾಡಲು ಬರುವದಿಲ್ಲ. ಯಾವ ಭಾಷೆಯಲ್ಲಿ ಅವುಗಳೊಂದಿಗೆ ನೀನು ಸಂಭಾಷಿಸುತ್ತಿದ್ದೆ? ಬಂದ ಮೇಲೆ ನನಗೂ ಕಲಿಸು. ಎಷ್ಟೊಂದು ಹೂಗಳಾಗುತ್ತಿದ್ದವು, ಅವುಗಳ ಸಂಖ್ಯೆ ಈಗ ಇಳಿಮುಖವಾಗಿದೆ, ನೀನು ಹೋಗಿ ಒಂದು ವಾರವೂ ಆಗಲಿಲ್ಲ. ಒಂದು ಸಾರೆ ಮಳೆಗಾಲದಲ್ಲಿ ನಗರದ ಕೆಲಭಾಗಗಳು ನೀರಿನಿಂದ ತುಂಬಿಕೊಂಡಾಗ ನೀನು ಹಾಗೂ ನಿನ್ನ ಸ್ನೇಹಿತೆಯರೆಲ್ಲ ಆ ಜಾಗೆಗೆ ಭೇಟಿ ಕೊಟ್ಟು ಅವರಿಗೆ ಆರ್ಥಿಕ ಸಹಾಯ ಮಾಡಿದಿರಿ. ಮನೆಮನೆಗೆ ಹೋಗಿ ವಸ್ತುಗಳನ್ನು ಸಂಗ್ರಹಿಸಿ ಕೊಂಡೊಯ್ದು ಕೊಟ್ಟಿರಿ. ನೀವಾವ ಎನ್.ಜಿ.ಓ. ಆಗಿರಲಿಲ್ಲ, ನಿಮ್ಮ ಹೆಸರು ಪತ್ರಿಕೆಗಳಲ್ಲಿ ಬರಲಿಲ್ಲ. ಬೆಸ್ಟ ಎಂದು ನಾನೆಂದಾಗ ಅಳಿಲು ಸೇವೆ ಎಂದಿದ್ದೆ. ಅವರೆಲ್ಲರನ್ನು ನಿನ್ನ ಮಾತಿನಲ್ಲಿ ಎಳೆತರುವ ಸಾಧ್ಯತೆ ನಿನಗಿತ್ತು.

ನಿನ್ನ ನಗೆ ಶುಭ್ರವಾಗಿತ್ತು. ಆ ನಗೆಯು ಅಪಾರ ನೋವನ್ನೂ ತುಂಬಿಕೊಂಡಿತ್ತು. ಪ್ರಕೃತಿಯ ಕೋಪಕ್ಕೆ ಜನರು ನುಗ್ಗಾಗುವ ಪರಿಗೆ ನೀನು ನಲುಗಿದ್ದೆ. ಬದುಕು ಹೀಗೆ ಎಂದುಕೊಂಡಿದ್ದೆ. ಆ ಸಾಂತ್ವನದಲ್ಲಿ ಕವಿಯ ಸಾಲುಗಳು ನೆನಪಾಗಿದ್ದವು. 'ಸಂಸಾರವೆಂಬುದು ಸಾಗರ ದೊಡನಾಟ, ಲವಣೋದಧಿಯಲ್ಲಿ ಜಲಪಯಣ' ಎಂದಿದ್ದೆ. ಪಕ್ಕದ ಮನೆಯ ರಶ್ಮಿ ಗಂಡನೊಂದಿಗೆ ಜಗಳ ಮಾಡಿಕೊಂದು ಬಂದಾಗ ಆ ಗಂಡ ಬೇಡವೇ ಬೇಡ ಎಂದು ನಿರ್ಣಯ ತೆಗೆದುಕೊಳ್ಳಬೇಕೆಂದಿರುವಾಗ ಅವಳ ತಾಯಿ ನಿನ್ನ ಸಹಾಯ ಕೋರಿದ್ದರು. ಆಕೆಗೆ ನೀನು ಏನೇನು ಹೇಳಿದೆಯೋ ನನಗೆ ತಿಳಿಯದು. ಆದರೆ ಒಂದು ಮಾತು ಇನ್ನೂ ನೆನಪಿನಲ್ಲಿದೆ. 'ನಾವು ನಾಯಿಗಳನ್ನು ಸಾಕುತ್ತೇವೆ, ಪ್ರೀತಿಸುತ್ತೇವೆ, ಆಗ ಅದು ನಾವು ಹೇಳಿದಂತೆ ಕೇಳುತ್ತದೆ, ಆದರೆ ಒಬ್ಬ ಮನುಷ್ಯನನ್ನು ಪ್ರೇಮದಿಂದ ನೀನು ಬದಲಾಯಿಸಲಾರೆಯೇ ವಿಚಾರಿಸಿ ನೋಡು'. ಆಕೆ ಏನನ್ನೂ ಹೇಳಲಿಲ್ಲ. ಆದರೆ ಅವಳ ಗಂಡ ಮಾರನೇ ದಿನ ಬಂದು ಅವಳನ್ನು ಕರೆದೊಯ್ದ. ಇಬ್ಬರೂ ಚೆನ್ನಾಗಿದ್ದಾರೆ, ಹೊಂದಾಣಿಕೆ ಮಾಡಿಕೊಂಡಿದ್ದಾರೆ.

✍ ದಾಕ್ಷಾಯಣಿ ಯಡಹಳ್ಳಿ.

ಆಕೆಯಲ್ಲಿ ನೈತಿಕ ಬಲವನ್ನು ಆತ್ಮಸ್ಥೈರ್ಯವನ್ನು ತುಂಬಿದ್ದೆ. ಬಹುಶಃ ಸಹನೆಯ ಮಹತ್ವವನ್ನು ತಿಳಿಸಿ ಹೇಳಿದ್ದೆ. ನಿನ್ನ ಹವಳದ ತುಟಿಗಳು ಕೇವಲ ಅಲುಗಾಡುವದಿಲ್ಲ. ಒಂದು ಸಂದೇಶವನ್ನು ಸಂವಹನ ಗೊಳಿಸುತ್ತವೆ. ಆದರೆ ಮೇಲಿನ ಮನೆಯ ಜಾನಕಿಯ ಸಮಸ್ಯೆಗೆ ನೀನು ಹೇಳಿದ ಪರಿಹಾರ, ವಿಚ್ಛೇದನೆ. ಹೀಗೇಕೆಂದು ನಾನು ವಿಚಾರಿಸಿದಾಗ ಜಾನಪದ ಕವಿಯನ್ನು ನೆನಪಿಸಿಕೊಂಡೆ. 'ಸಂಸಾರವೆಂಬುದು ಸಾಗರದ ಹೊಳೆಯವ್ವ ಓದು ಬಲ್ಲವಗೆ ಎದೆಯುದ್ದ' ಕವಿತೆ ಬೇಡ ನೀನು ಮಾಡಿದ್ದು ಸರಿಯಾಗಲಿಲ್ಲ ಎಂದಾಗ ಭೂಮಿಯ ಮೇಲೆ ಬೀಜ ಬಿತ್ತಬೇಕಲ್ಲದೇ ಕಲ್ಲಿನ ಮೇಲೆ ಬಿತ್ತಲಾದೀತೇ ಎಂದಿದ್ದೆ. ಅವಳ ಗಂಡ ಹೊಣೆಗೇಡಿ ಕುಡುಕನಾಗಿದ್ದ. ಹೆಂಡತಿಯನ್ನು ದುಡಿಸಿ ಬದುಕಬೇಕೆಂದು ಕೊಂಡಿದ್ದ. ಅಂತವನೊಂದಿಗೆ ಬಾಳುವದು ಸಾಧ್ಯವಿಲ್ಲ ಎಂದು ನಂತರ ವಿವರಿಸಿದ್ದೆ.

ನೀನು ಶಿಸ್ತು ಪ್ರಿಯಳು. ಒಂದು ಸಾಮಾನು ಆಚೀಚೆ ಆದರೂ ನಿನಗೆ ಸಹನವಾಗುತ್ತಿರಲಿಲ್ಲ. ಶಿಸ್ತು ಹಾಗೂ ಸಮಯ ಪ್ರಜ್ಞೆಯಿಂದಾಗಿ ಬ್ರಿಟಿಶರು ಇಡೀ ಜಗತ್ತನ್ನು ಆಳುವಲ್ಲಿ ಸಮರ್ಥರಾದರು ಎಂದು ಹೇಳುತ್ತಿದ್ದೆ. ನಿನ್ನ ಈ ಗುಣವನ್ನು ಮಕ್ಕಳು ಅಳವಡಿಸಿಕೊಂಡರು. ಅವರಿಗೆ ಸ್ವಾತಂತ್ರ ಕೊಟ್ಟೆ ಅದನ್ನು ದುರುಪಯೋಗಪಡಿಸದಂತೆ ಎಚ್ಚರವಹಿಸಿದೆ. ಮಗ ಮಗಳು ಇಬ್ಬರಲ್ಲಿಯೂ ಯಾವ ಭೇದವನ್ನೂ ಕಲ್ಪಿಸಲಿಲ್ಲ. ನಿನ್ನ ಈ ಸಮಾನತೆಯನ್ನು ನಾನು ತುಂಬಾ ಮೆಚ್ಚುತ್ತೇನೆ. ಪ್ರತಿಕ್ಷಣ ನೀನು ಉಸಿರಾಡುತ್ತಿದ್ದೆ. ಅದರ ಪ್ರಜ್ಞೆ ನಿನಗಿತ್ತು. ಕೆಳಗೆ ಬಿದ್ದ ಕಾಗದದ ಒಂದು ಚೂರೂ ಅಕಸ್ಮಾತ್ ಕಾಲಿಗೆ ತಾಕಿದರೆ ಎತ್ತಿ ಹಣೆಗೊತ್ತಿಕೊಳ್ಳುತ್ತಿದ್ದೆ. ನಿಂದು ತೀರ ಅತಿಯಾಯಿತು ಎಂದು ನಾನು ಸಿಡುಕಿದರೆ ಗುರೂಜಿಯ ಮಾತನ್ನು ನೆನಪಿಸುತ್ತಿದ್ದೆ. ಸುತ್ತಲ ಜಗತ್ತಿನ ಅರಿವು ನಿಮಗಿದೆ ಹಾಗೆ ಅದಕ್ಕೆ ಕೂಡ ನಿಮ್ಮ ಅರಿವು ಇರಬೇಕು, ಯಾವುದನ್ನೂ ಅಸಡ್ಡೆಯಿಂದ ನೋಡಬಾರದು ಎನ್ನತ್ತಿದ್ದೆ. ಇಂಥ ಜಾಗ್ರತೆ ನನ್ನಲ್ಲಿರಲಿಲ್ಲ. ಈ ಮಹಾನಗರದ ಗಡಿಬಿಡಿಯ ಜೀವನದಲ್ಲಿ ವ್ಯಸ್ತಗೊಂಡಿರುತ್ತಿದ್ದೆ. ರೇಲಿನೊಂದಿಗೆ ಸ್ಪರ್ಧೆ ಮಾಡಬೇಕಾ ಗುತ್ತದೆ. ನಾವು ನಾವಾಗಿರುವದಿಲ್ಲ, ನಮ್ಮನ್ನು ಮರೆತೇ ಬಿಟ್ಟಿರುತ್ತೇವೆ. ರೇಲನ್ನು ಹತ್ತಿಳಿಯುವಾಗ ಎಷ್ಟು ಜನರನ್ನು ತುಳಿಯುತ್ತೇವೆಂಬ ಎಚ್ಚರವೂ ಇರುವದಿಲ್ಲ. ನೀನು ಮಾತ್ರ ಸದಾ ಎಚ್ಚಿರುತ್ತಿದ್ದೆ. ನನ್ನ ಸಂಗಾತಿಯ ಬಗ್ಗೆ ನನಗೀಗ ಬಹಳೇ ಹೆಮ್ಮೆಯೆನಿಸುತ್ತದೆ.

ಹವಾಮಾನದ ವ್ಯತ್ಯಾಸದಲ್ಲಿ ನಾವುಗಳು ಬೇಸರಗೊಂಡಾಗ ಸಾಂತ್ವನಗೊಳಿಸಿದ್ದೆ. ಈ ದೇಹಕ್ಕೆ ಮಳೆ ಚಳಿ ಗಾಳಿ ಬಿಸಿಲು ಎಲ್ಲವೂ ಅನುಭವವಾಗಬೇಕು ಎಂದಿದ್ದೆ. ಮುಷ್ಕರಗಳು, ರೇಲು ಅಪಘಾತಗಳು, ಬಾಂಬ್ ಬ್ಲಾಸ್ಟಗಳು ನಮ್ಮ ಬದುಕಿನ ಒಂದು ಭಾಗವಾಗಿ ಹೋಗಿದ್ದವು. ನಾಳೆ ಎನಾದೀತೊ ಎಂದು ಮಕ್ಕಳು ಹೆದರಿದಾಗ ಯಾವುದಕ್ಕೂ ಹೆದರಬಾರದು ಕಷ್ಟಗಳಿಗೆ ಎದೆಗೊಡಬೇಕು ಎಂದು ಕಲಿಸಿದೆ. ಆಸ್ತಿಗಾಗಿ ನನ್ನ ತಮ್ಮನೊಡನೆ ಜಗಳ ಮಾಡಲೆಳಿಸಿದ ನನ್ನನ್ನು ತಡೆದೆ. ದುಡಿಯುವವರು ತಿನ್ನಲಿ ಎಂಬ ತತ್ವ ಹೇಳಿದೆ. ಸುಳ್ಳು ನಿನಗೆ ಹಿಡಿಸುವದಿಲ್ಲ. ಕೆಲ ಸಾರೆ ಆ ದಿಸೆಯಲ್ಲಿ ನಾನು ಹೋದಾಗ ಅಕ್ಷೇಪಿಸುತ್ತಿದ್ದೆ. ನಮ್ಮ ಮಕ್ಕಳಿಗೆ ಜೀವನ ಮೌಲ್ಯಗಳನ್ನು ಕಲಿಸಬೇಕಾದರೆ ನಮ್ಮ ನಡೆನುಡಿಗಳಲ್ಲಿ ಅದನ್ನು ತೋರಿಸಬೇಕು ಎಂದಿದ್ದೆ. ಅಪಾಯಕಾರಿಯಲ್ಲದ ಸುಳ್ಳೂ ಸುಳ್ಳೇ ಎಂದು ವಾದಿಸುತ್ತಿದ್ದೆ. ಅಂತಹ ಒಂದು ಸಂದರ್ಭದಲ್ಲಿ ನನ್ನ ಸಹನೆಯ ಮಿಕ್ಕಿ ನಾಲ್ಕಾರು ಅಪಶಬ್ದಗಳು ಬಾಯಿಂದ ಹೊರಜಾರಿದಾಗ ನಿನ್ನ ಕಣ್ಣಲ್ಲಿ ನೀರು ಬಂದಿತ್ತು. ಈ ಜಗತ್ತಿನಲ್ಲಿ ಹೀಗೆ ಇರಲೇಬೇಕಾಗುತ್ತದೆ ಎಂದು ನಾನು ಸಮರ್ಥಿಸಿಕೊಂಡಿದ್ದೆ. ನಾಲ್ಕು ದಿನಗಳವರೆಗೆ ನಮ್ಮಲ್ಲಿ ಶೀತಲ ಯುದ್ಧವಾಗಿತ್ತು. ಅದನ್ನು ಮುರಿದು ಮಾತಾಡಿದವಳು ನೀನೇ.

ನಾನು ಕೂಗಾಡಿದಾಗ ಶಾಂತಿಯ ಮೊರೆ ಹೊಕ್ಕವಳು, ಹೊಯ್ದರೆ ಹೊಯ್ಸಳು ಕೈಯ ಮೇಲೆ, ಬಯ್ದರೆ ಬಯ್ಗಳು ಕೈಯ ಮೇಲೆ ಎಂದು ಶರಣರನ್ನು ನೆನಪಿಸಿಕೊಂಡವಳು. ನೀನು ಧರಣಿಯಾದೆ. ನಾನು ಅತಿವೃಷ್ಟಿಯಾದೆ. ನನ್ನ ಅಹಂಭಾವ ನನ್ನನ್ನು ಬಗ್ಗಲು ಬಿಡಲಿಲ್ಲ. ನೀನೂ ಯಾವಾಗಲೂ ಬಗ್ಗುತ್ತಿರಲಿಲ್ಲ. ಧ್ವನಿ ಎತ್ತುತ್ತಿದ್ದೆ, ಆದರೂ ಸಾವರಿಸಿಕೊಳ್ಳುತ್ತಿದ್ದೆ.

ನೀನಿಲ್ಲದೇ ನಾನಿಲ್ಲ, ನನ್ನ ಜಗತ್ತೀಗ ಘುಕೋಶಿಮಾದಂತಾಗಿದೆ ಎನ್ನಲಾರೆ, ಯಾವಾಗ ಬರುತ್ತೀ ಎಂದೂ ನಾನು ಕೇಳುವದಿಲ್ಲ. ಹೊಸ ಜೀವವೊಂದನ್ನು ಈ ಜಗತ್ತಿಗೆ ತರುತ್ತಿರುವ ಮಗಳಿಗೆ ಸಹಾಯಮಾಡಲು ಹೋಗಿರುವೆ. ಈಗ ನೀನಿಲ್ಲ ಎನಿಸಿಕೊಳ್ಳುವದಿಲ್ಲ. ನನ್ನ ಮನದಲ್ಲಿ, ಮನೆಯಲ್ಲಿರುವ ಪ್ರತಿಯೊಂದು ವಸ್ತುವಿನಲ್ಲಿ ನೀನೇ ನೀನಾಗಿರುವೆ. ನಿನ್ನನ್ನು ನಾನು ತುಂಬ ಪ್ರೀತಿಸುತ್ತೇನೆ.

ವಸಂತಕಾಲದಲ್ಲಿ ನಿನ್ನ ದೇಹವನ್ನು ಪ್ರೀತಿಸಿದ್ದೆ. ಈಗ ನಿಜವಾಗಿ ನಿನ್ನನ್ನು ಆರಾಧಿಸುತ್ತೇನೆ. ನಮ್ಮ ಸಹಜೀವನ ಪ್ರಾರಂಭವಾದ ಹೊಸತರಲ್ಲಿ ನಿನ್ನನ್ನು ಬಿಟ್ಟಿರಲು ನನಗೆ ಸಾಧ್ಯವಾಗುತ್ತಿರಲಿಲ್ಲ. ಮಿಲನ ಮತ್ತು ಅಗಲಿಕೆ ಬೇಕೇ ಬೇಕು ಇಲ್ಲದಿದ್ದರೆ ಬದುಕು ಪೂರ್ಣಗೊಳ್ಳದು ಎನ್ನುತ್ತಿದ್ದೆ. ನೀನಿಲ್ಲಿ ಬಂದಾಗ ಗಿಡ ಹಚ್ಚಲು ಸ್ಥಳವೇ ಇಲ್ಲ ಎಂದು ಚಡಪಡಿಸಿದ್ದೆ. ಆ ನೆವದಲ್ಲಿ ತವರಿಗೆ ಓಡುತ್ತಿದ್ದೆ.(ನಿನ್ನ ತೌರಿನಲ್ಲಿ ಮನೆಯ ಮುಂದೆ ಹೂದೋಟ. ಹಣ್ಣಿನ ಗಿಡಗಳೂ ಇದ್ದವು.) ಮಣ್ಣಿನ ಕುಂಡಗಳನ್ನು ತಂದು ಅಲ್ಲಿ ಗಿಡಗಳನ್ನು ಬೆಳೆಸಿ ಸಮಾಧಾನಪಟ್ಟುಕೊಂಡಿದ್ದೆ. ಮನುಷ್ಯರ ಮೇಲೆ ಮನುಷ್ಯರು ಓಡಾಡುತ್ತಾರೆ ಎಂಬ ಅಸಮಾಧಾನವೂ ಇತ್ತು.

ನೀನು ಉದ್ಯೋಗಸ್ಥಳಾದ ಮೇಲೆ ಎಲ್ಲ ಬದಲಾಯಿತು. ಮಿಲನವೆ ಅನಿವಾರ್ಯವಾಯಿತು. ಆಗೀಗ ನಡೆದ ರೇಲು ಮುಷ್ಕರಗಳೇ ನಮ್ಮನ್ನು ಅಗಲಿಸಿದ್ದು. ಸಖಿ ಪತ್ರವೇನೋ ದೀರ್ಘವಾಯಿತು, ಆದರೆ ನಾನು ಅನುಕ್ಷಣವೂ ನಿನ್ನನ್ನು ಗಮನಿಸುತ್ತಿದ್ದೆ ಎಂದು ನೀನು ಹೆಮ್ಮೆಪಟ್ಟು ಕೊಳ್ಳುವದಿಲ್ಲವೇ? ನಿನಗೆ ಜೀವನದ ಮೇಲೆ ಅಗಾಧ ಪ್ರೀತಿ, ಹಾಗೆಯೇ ಸಜೀವ ಹಾಗೂ ನಿರ್ಜೀವ ಜಗತ್ತಿನ ಮೇಲೆಯೂ ಪ್ರೀತಿ. ಯಾವುದಕ್ಕೂ ಬೇಸರಿಸಿಕೊಂಡವಳಲ್ಲ. ನೋವಿನ ಘಟನೆಗಳು ಕೇವಲ ಕ್ಷಣಗಳಾಗುತ್ತಿದ್ದವು. ಸದಾ ಹಸನ್ಮುಖಿಯಾದ ನಿನ್ನನ್ನು ನೆರೆಹೊರೆಯವರು ಮೆಚ್ಚಿಕೊಳ್ಳುತ್ತಿದ್ದುದು ಸೋಜಿಗದ ಸಂಗತಿಯಲ್ಲ. ನಕ್ಕು ಬಿಡು ಕುಲುಕುಲು ಕಲಕಲ, ಆದರೆ ಉತ್ತರಿಸು.

ಸದಾ ನಿನ್ನವನೇ ಆದ

**ಪ್ರಿಯಂವದ**

# ಮುಂಬೈ ವಿಶ್ವವಿದ್ಯಾಲಯ ಕನ್ನಡ ಎಂ. ಎ. ಪದವಿಗೆ ಅರ್ಜಿ ಆಹ್ವಾನ

ಮುಂಬಯಿ : ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಎಂ.ಎ. (ಸೆಮಿಸ್ಟರ್) ಪ್ರಥಮ ವರ್ಷ ತರಗತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. 2015 – 2016ನೇ ಸಾಲಿನ ತರಗತಿಗಳಿಗೆ ಸೇರಬಯಸುವ ಅರ್ಹ ಅಭ್ಯರ್ಥಿಗಳು ವಿಭಾಗದ ಕಛೇರಿಯಿಂದ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಬಹುದು. ಅರ್ಜಿಗಳನ್ನು ಅಂಚೆ ಮೂಲಕ ತರಿಸಿಕೊಳ್ಳುವ ಅಭ್ಯರ್ಥಿಗಳು,

Dr. G. N. Upadhya, Head, Department of Kannada, University of Mumbai, Ranade Bhavan, Vidyanagari, Santacruz(East), Mumbai – 400 098 (Tel. No. 26543530, 26543469,26543345)

Email: kannadadepartment@gmail.com

(University Website www.mu.ac.in)

ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅರ್ಹ ವಿದ್ಯಾರ್ಥಿಗಳಿಗೆ ಮಾಸಿಕ ಎರಡು ಸಾವಿರ ರೂಪಾಯಿ ಹಾಗೂ ಕರ್ನಾಟಕ ಸಂಘ ಮುಂಬಯಿ ವಾರ್ಷಿಕ ಮೂರು ಸಾವಿರ ರೂ. ವಿದ್ಯಾರ್ಥಿವೇತನ ನೀಡುತ್ತಿದೆ.

ಮೇಲಿನ ಈ ವಿಳಾಸಕ್ಕೆ, ಸ್ವವಿಳಾಸ ಹೊಂದಿದ ಹತ್ತು ರೂಪಾಯಿಗಳ ಸ್ಟ್ಯಾಂಪ್ ಹಚ್ಚಿದ ಕವರುಗಳನ್ನು ಲಗತ್ತಿಸಿ ವ್ಯವಹರಿಸಬೇಕು. ತುಂಬಿದ ಅರ್ಜಿಯನ್ನು ಜುಲೈ ತಿಂಗಳ ದಿನಾಂಕ 20 ರೊಳಗೆ ತಲುಪುವಂತೆ ಕಳುಹಿಸಿಕೊಡಲು ವಿಭಾಗದ ಪ್ರಕಟಣೆ ತಿಳಿಸಿದೆ.

# ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಕಲಿಯಲು ಅವಕಾಶ

ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಬಾರದವರಿಗೆ, ಕನ್ನಡೇತರರಿಗೆ ಕನ್ನಡ ಕಲಿಸುವ ಸರ್ಟಿಫಿಕೇಟ್, ಡಿಪ್ಲೊಮಾ ತರಗತಿಗಳನ್ನು ನಡೆಸುತ್ತಿದ್ದು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎಸ್ ಎಸ್ ಸಿ ಉತ್ತೀರ್ಣರಾದವರು ಕನ್ನಡ ಸರ್ಟಿಫಿಕೇಟ್ ತರಗತಿಗೆ ಸೇರಬಹುದಾಗಿದೆ. ಪ್ರತಿ ಶನಿವಾರ ಮಧ್ಯಾಹ್ನ 4 ರಿಂದ 6ರವರೆಗೆ ಕಲಿನಾ ಕ್ಯಾಂಪಸ್‌ದಲ್ಲಿ ತರಗತಿಗಳು ನಡೆಯಲಿವೆ. ನವಿಮುಂಬಯಿ ಕನ್ನಡ ಸಂಘದಲ್ಲಿಯೂ ಕನ್ನಡ ಕಲಿಯಲು ವಿಶ್ವವಿದ್ಯಾಲಯ ಅನುವು ಮಾಡಿಕೊಟ್ಟಿದ್ದು ಅಲ್ಲಿ ಪ್ರತಿ ಭಾನುವಾರ ಸಂಜೆ ತರಗತಿಗಳು ನಡೆಯಲಿವೆ. ಕನ್ನಡದಲ್ಲಿ ಪ್ರಭುತ್ವ ಸಾಧಿಸಿದ, ಯಾವುದೇ ಪದವಿಗಳಿಸಿದವರು ವಿಶ್ವವಿದ್ಯಾಲಯ ನಡೆಸುವ ಕನ್ನಡ ಡಿಪ್ಲೊಮಾ ತರಗತಿಗೆ ಪ್ರವೇಶ ಪಡೆಯಬಹುದಾಗಿದೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು ವಿಭಾಗದ ಸಂಶೋಧನ ಸಹಾಯಕರಾದ ಪೂರ್ಣಿಮಾ ಶೆಟ್ಟಿ (9820310893), ಶಿವರಾಜ್ ಎಂ. ಜಿ. (9029499253) ನವಿ ಮುಂಬಯಿ ಕನ್ನಡ ಸಂಘ (27653443), ಹಾಗೂ ಕನ್ನಡ ವಿಭಾಗದ ಕಛೇರಿಯನ್ನು (26543469) ಸಂಪರ್ಕಿಸಿ ಪಡೆಯಬಹುದಾಗಿದೆ.

ಈ ಸಾಲಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ ಆಗಸ್ಟ್ 27ಎಂದು ವಿಭಾಗದ ಪ್ರಕಟಣೆ ತಿಳಿಸಿದೆ.

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು

**ವಿದ್ವಾನ್ ವೀಣೆ ಶೇಷಣ್ಣ (ವೀಣಾ ವಾದಕರು – ವಾಗ್ಗೇಯಕಾರರು)**



ಇವರು 1852ರ ಕಾರ್ತೀಕ ಪಂಚಮಿಯ ದಿನದಂದು ಭಕ್ಷಿ ಚಿಕ್ಕ ರಾಮಪ್ಪನವರ ಸುಪುತ್ರರಾಗಿ ಜನಿಸಿದರು. ಪ್ರಥಮ ಪಾಠ ತಂದೆಯವರಿಂದಲೇ ವಿದ್ಯಾಭ್ಯಾಸ ಪಡೆದ ಇವರು ತಮ್ಮ ಎಳೆಯ ವಯಸ್ಸಿನಿಂದಲೇ ಮೈಸೂರಿನ ಆಸ್ಥಾನದಲ್ಲಿ ಹಾಡಿ ಮೆಚ್ಚುಗೆ ಗಳಿಸಿ ಮಹಾರಾಜರಿಂದ ಕಂಠೀ ಹಾರವನ್ನು ಪಡೆದ ಮಹಾನ್ ಚೇತನ. ತಂದೆಯವರ ನಂತರ ದೊಡ್ಡ ಶೇಷಣ್ಣನವರಲ್ಲಿ ಸಂಗೀತ ಸಾಧನೆ ಮುಂದುವರಿಕೆ. ವಿದ್ಯಾಭ್ಯಾಸದ ಜೊತೆ ಜೊತೆಯಲ್ಲಿಯೇ ಗಾಯನ. ಗಾಯನದ ಗುರುಗಳಾದರೂ ಪ್ರಖ್ಯಾತ ಮೈಸೂರು ಸದಾಶಿವರಾಯರು. ಮೈಸೂರು ಸದಾಶಿವರಾಯರು ತ್ಯಾಗರಾಜರ ಪ್ರಶಿಷ್ಯರು. ವೀಣೆ ಶೇಷಣ್ಣನವರ ಮತ್ತು ವೀಣೆ ಸುಬ್ಬಣ್ಣನವರ ಸಮ್ಮಿಲನ ಒಂದು ಅಪೂರ್ವ ರಸಾನುಭವ.

ಇವರ ಕಛೇರಿಯ ಅವಧಿ ಸುಮಾರು ಕಡೆಯ ಪಕ್ಷ ನಾಲ್ಕು ಗಂಟೆಗಳಾದರೂ ಆಗುತ್ತಿತ್ತು. ಪಲ್ಲವಿಗೆ ಪ್ರಾಶಸ್ತ್ಯ, ರಾಗ ಪ್ರಧಾನ, ಪ್ರತಿಯೊಂದು ಕಛೇರಿಯಲ್ಲಿಯೂ ಪ್ರತಿಯೊಂದು ರಾಗಕ್ಕೂ ವಿಶೇಷ ಆಕಾರ ಕೊಡುವ ಧೀಮಂತ ಕಲಾವಿದರು ಶೇಷಣ್ಣನವರು.

ಇವರು ಅಪಾರ ಶಿಷ್ಯರಿಗೆ ವಿದ್ಯಾದಾನ ಮಾಡಿದಾರೆ. ಇವರಲ್ಲಿ ಅನೇಕರು ನಾಡಿಗೆ ಒಳ್ಳೆಯ ಹೆಸರು ಗಳಿಸಿಕೊಟ್ಟಿದ್ದಾರೆ. ತಿರುಮಲೆ ರಾಜಮ್ಮ, ಎಂ.ಎಸ್.ಭೀಮರಾವ್, ಸ್ವರಮೂರ್ತಿ ವಿ.ಎನ್.ರಾವ್, ವೆಂಕಟಗಿರಿಯಪ್ಪ ಮುಂತದ ಪ್ರಖ್ಯಾತ ನಾಮರು ಇವರ ಗರಡಿಯಲ್ಲಿಯೇ ಪಳಗಿದ ಪ್ರಮುಖರು. ವೀಣೆಯಲ್ಲಿ ಪ್ರಖ್ಯಾತ ನಾಮರಾದ ಶ್ರೀಯುತರು ಗಾಯನ ಹಾಗೂ ಇತರ ವಾದ್ಯಗಳಾದ ಜಲತರಂಗ್ ವಾದನದಲ್ಲಿಯೂ ಪ್ರಖ್ಯಾತರು.

ಇವರ ಸಾಧನೆಯು ಎಷ್ಟು ಶಕ್ತಿಯುತವಾಗಿದ್ದಿತೆಂದರೆ ಮೈಸೂರಿನ ಮಹಾರಾಜರ ಸಮ್ಮುಖದಲ್ಲಿ ಯಾರಾದರೂ ಕಛೇರಿ ಮಾಡ ಬಯಸಿದರೆ ಮೊದಲು ಶೇಷಣ್ಣನವರ ಮುಂದೆ ಹಾಡಬೇಕಿತ್ತು ಅಥವಾ ನುಡಿಸಬೇಕಿತ್ತು. ಶೇಷಣ್ಣನವರು ಒಪ್ಪಿದರೆ ಮಹಾರಾಜರ ಮುಂದೆ ಅವರ ಕಛೇರಿ ನಡೆಯುತ್ತಿತ್ತು. ಇಲ್ಲದಿದ್ದರೆ ಇಲ್ಲ.

ಶೇಷಣ್ಣನವರು 1926ನೇ ಇಸವಿ ಜುಲೈ ತಿಂಗಳ 25ನೇ ದಿನಾಂಕ ವಿಧಿವಶರಾದರು. ಆದರೆ ಅವರಿಂದ ಬಂದ ಅಂತಿಮ ಸಂದೇಶ "ಸಾಯಲು ನನಗೆ ಅಂಜಿಕೆ ಇಲ್ಲ. ಆದರೆ ವೀಣೆಯನ್ನು ಬಿಟ್ಟು ಹೋಗಲು ಮನ ಒಪ್ಪುತ್ತಿಲ್ಲ' ಎಂದು. ಕರ್ನಾಟಕ ಸಂಗೀತ ಜೀವಂತವಾಗಿರುವವರೆಗೂ ಇವರ ಹೆಸರು ಅಮರ.

ಕೃಪೆ: ನ.ರಾಜಾರಾವ್
ಶ್ರೀ ಹರಿದಾಸ ಪೀಠ

# ಮಬ್ಬು ಕವಿದಾಗ

ಅಂದು ಭಾನುವಾರ ಪ್ರೊ. ರಾಮಪ್ಪನವರು ಈಸಿ ಚೇರ್‌ನಲ್ಲಿ ಕುಳಿತು ಮಡದಿ ಮಾಡಿದ ಏಲಕ್ಕಿ ಮಿಶ್ರಿತ ಚಹಾವನ್ನು ಹೀರುತ್ತಾ ಎಂದಿನಂತೆ ಪೇಪರ್ ಓದುತ್ತಾ ಕುಳಿತಿದ್ದರು. ಪೇಪರ್ ಓದಿ ಮುಗಿದ ಬಳಿಕ ಮಡದಿ ಪಂಕಜಳನ್ನು ಕರೆದರು. ಅಡಿಗೆ ಕೋಣೆಯಲ್ಲಿ ಮಾಡುತ್ತಿದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು ಪತಿಯ ಬಳಿ ಬಂದು ಕುಳಿತರು ಪಂಕಜಮ್ಮ.

ಏನಾಯ್ತು ರೀ? ಯಾಕೆ ಕರೆದದ್ದು, ಇವತ್ತಿನ ಟೀ ಸರಿಯಾಗಲಿಲ್ವೇ? ಎಂದು ನುಡಿದರು ಪಂಕಜಮ್ಮ.

"ಛೇ.. ಛೇ... ಹಾಗೇನು ಇಲ್ಲ. ನೀನು ಮಾಡಿದ ಅಡಿಗೆಗೆ ಯಾವತ್ತಾದರೂ ಚೆನ್ನಾಗಿಲ್ಲ" ಅಂತ ಕಮೆಂಟ್ ಕೊಟ್ಟಿದ್ದೇನಾ? ಎಂದು ಕಣ್ಣು ಮಿಟುಕಿಸಿದರು. "ಅದೆಲ್ಲ ಬಿಡು, ನಾನು ನಿನ್ನನ್ನು ಕರೆದದ್ದು ಶಶಾಂಕ್ ಬಗ್ಗೆ ತಿಳಿದುಕೊಳ್ಳಲಿಕ್ಕೆ. ಶಶಾಂಕ್ ಅಮೇರಿಕಕ್ಕೆ ಹೋಗಿ ವರ್ಷಗಳೇ ಸಂದವು. ಮದುವೆಯ ಪ್ರಾಯ ಆಗಿದೆ. ಅವನ ಮೂಗಿಗೆ ದಾರ ಕಟ್ಟಬೇಕಾದ್ದು ನಮ್ಮ ಕರ್ತವ್ಯ ತಾನೆ. ನೀನೇನಾದರೂ ಇದರ ಬಗ್ಗೆ ಶಶಾಂಕನಲ್ಲಿ ಮಾತನಾಡಿದ್ದೀಯಾ ಏನೋ ಅಂತ ತಿಳಿದುಕೊಳ್ಳುವ ತವಕದಿಂದ ಕರೆದೆ ಅಷ್ಟೇ".

ಅದಕ್ಕೆ ಪಂಕಜಮ್ಮ, "ಇಲ್ಲ ಈ ವಿಷಯದಲ್ಲಿ ಯಾವತ್ತೂ ಮಾತನಾಡಿಲ್ಲ. ಈಗಿನ ಕಾಲದ ಹುಡುಗರು; ನಾವು ಮೆಚ್ಚಿದ ಹುಡುಗಿಯರನ್ನು ಮದುವೆಯಾಗುತ್ತಾರೆಯೇ? ಅದೂ ಅಲ್ಲದೆ ಮದುವೆಯಾಗಲಿಕ್ಕೆ ನಮ್ಮ ಶಶಾಂಕ್‌ಗೆ ಏನು ಮಹಾ ವರ್ಷವಾಗಿದೆ. ಮೊದಲು ಅವನು ತನ್ನ ಕಾಲ ಮೇಲೆ ಸರಿಯಾಗಿ ನಿಲ್ಲಲಿ. ಆಮೇಲೆ ನೋಡುವ" ಎಂದು ಉತ್ತರಿಸಿದರು. ಬೆಳೆದ ಮಗನ ಮದುವೆಯ ಬಗ್ಗೆ ತನಗೆ ಎಳ್ಳಷ್ಟೂ ಆತುರ ಇಲ್ಲ ಎನ್ನುವಂತೆ ವರ್ತಿಸಿದರು ಪಂಕಜಮ್ಮ.

ಅದಕ್ಕೆ ರಾಮಪ್ಪನವರು ಪ್ರತಿನುಡಿಯುತ್ತಾ, "ಅಲ್ಲ ಕಣೇ, ನಾನು ಹೇಳಿದ್ದು ಯಾಕೆಂದರೆ ನಾಳೆ ಅವನು ಅಲ್ಲಿಯ ಹುಡುಗಿಯನ್ನು ಕಟ್ಟಿಕೊಂಡು ಅಲ್ಲಿಯೇ ಸೆಟ್ಲ್ ಆದರೆ ನಮ್ಮ ಗತಿಯೇನು? ಈ ಇಳಿವಯಸ್ಸಿನಲ್ಲಿ ಮಗನನ್ನು ಬಿಟ್ಟು ನಾವಿಬ್ಬರೇ ಎಷ್ಟು ದಿನ ಅಂತ ಇರೋದು. ನಾವು ಬದುಕಿರುವವರೆಗಾದರೂ ಮಗ ನಮ್ಮ ಜೊತೆಗಿರಬೇಕೆಂದು ಅಪೇಕ್ಷಿಸುವುದು ತಪ್ಪೇ!" ಎಂದು ಪ್ರಶ್ನಿಸಿದರು.

ಈ ಸಲ ನಿನ್ನ ಮಗನ ಫೋನು ಬಂದಾಗ ಈ ವಿಷಯದ ಕುರಿತು ಮಾತನಾಡು. ಅದಕ್ಕೆ ಪಂಕಜಮ್ಮ ಹುಸಿಕೋಪದಲ್ಲಿ "ಅಂದರೆ ಶಶಾಂಕ್ ನನಗೆ ಮಾತ್ರ ಮಗನೆ?" ನಿಮಗೆ ಮಗನಲ್ಲವೆ? ಬೇಕಿದ್ದರೆ ನೀವು ಮಾತನಾಡಿ ಅವನ ಬಳಿ ಎಂದು ಉದಾಸೀನದಿಂದ ನುಡಿದರು. ಅದಕ್ಕೆ ರಾಮಪ್ಪ, ಅಲ್ಲ; ನೀವು ಹೆಂಗಸರು ಇನ್ನೊಬ್ಬರ ಮನದಲ್ಲಿ ಏನು ನಡೆಯುತ್ತದೆ ಅನ್ನೋದನ್ನು ಬಹಳ ಬೇಗ ತಿಳಿದುಕೊಳ್ಳಬಲ್ಲಿರಿ. ಅದಕ್ಕೆ ನಾನು ಹೇಳಿದ್ದು ಮೊದಲು ಅವನ ಮನಸ್ಸಿನಲ್ಲಿ ಮದುವೆಯ ಬಗ್ಗೆ ಏನಿದೆ ವಿಚಾರ ಅನ್ನೋದನ್ನು ತಿಳಿದುಕೊಂಡು ನಂತರ ನಮ್ಮ ಪ್ರಸ್ತಾಪವನ್ನು ಮಂಡಿಸೋಣ ಅಂದಿದ್ದು. ಅದಕ್ಕೆ ಪಂಕಜಮ್ಮ ಮಾತಿಲ್ಲದೆ ಹೂಂಗುಟ್ಟಿದರು.

ರಾಮಪ್ಪ ಮತ್ತು ಪಂಕಜಮ್ಮ ಪರಸ್ಪರ ಒಬ್ಬೊನ್ನೊಬ್ಬರು ಪ್ರೇಮಿಸಿ ಮದುವೆಯಾದವರು. ಇಬ್ಬರಿಗೂ ನಮ್ಮವರು ಅಂತ ಯಾರೂ ಇರದಿದ್ದ ಕಾರಣ, ಬಂಧುಗಳೇ ಮುಂದೆ ನಿಂತು ಮದುವೆ ಮಾಡಿಸಿದ್ದರು. ಹಿರಿಯರ ಆಶೀರ್ವಾದದಿಂದ ಸಂತಸದಿಂದಲೇ ತಮ್ಮ ಹೊಸ ಜೀವನವನ್ನು ಪ್ರಾರಂಭಿಸಿದ್ದರು. ಪಂಕಜಮ್ಮ ಒಳ್ಳೆಯ ಗೃಹಿಣಿಯಾಗಿ ಮನೆ ನೋಡಿಕೊಂಡರೆ, ರಾಮಪ್ಪನವರು ಕಾಲೇಜೊಂದರಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಇರಲು ಮನೆ, ಹೊಟ್ಟೆ ಬಟ್ಟೆಗೆ ಏನೂ ಕಮ್ಮಿಯಿರಲಿಲ್ಲ. ಅವರಿಗಿರುವುದು ಒಂದೇ ಕೊರಗು. ಮಕ್ಕಳಿಲ್ಲದಿರುವುದು. ಪಂಕಜಮ್ಮ ಸಿಕ್ಕಿದ ದೇವರಿಗೆಲ್ಲ ಹರಕೆ ಹೊತ್ತಿದ್ದೇ ಹೊತ್ತಿದ್ದು. ಆದರೆ ಅದರಿಂದ ಏನೂ ಫಲವಾಗಲಿಲ್ಲ. ಮದುವೆಯಾಗಿ ಹನ್ನೆರಡು ವರ್ಷವಾದರೂ ಮಕ್ಕಳಾಗಿಲ್ಲ. ಇನ್ನು ಕಾಯೋದರಿಂದ ಏನು ಫಲವಿಲ್ಲ ಎಂದು, ಅದೇ ಊರಿನಲ್ಲಿರುವ ಅನಾಥಶ್ರಮದಿಂದ ಮಗುವನ್ನು ದತ್ತು ತೆಗೆದುಕೊಳ್ಳುವ ತೀರ್ಮಾನವನ್ನು ಕೈಗೊಂಡರು. ಅದೇ ರೀತಿ ಒಂದು ಗಂಡು ಮಗುವನ್ನು ದತ್ತುಪಡೆದು ಅದಕ್ಕೆ ಶಶಾಂಕ್ ಎಂದು ಹೆಸರಿಟ್ಟರು. ಮಗುವನ್ನು ದತ್ತು ಪಡೆದ ಮೇಲೆ ಬೇರೊಂದು ಕಡೆ ಸ್ಥಳಾಂತರಗೊಂಡರು. ಆಡುವವರ ಮಾತಿಗೆ ಅವಕಾಶ ಕೊಡಬಾರದೆಂದು ಈ ತೀರ್ಮಾನಕ್ಕೆ ಬಂದಿದ್ದರು. ಮಗು ಅವರ ಮಡಿಲನ್ನು ಸೇರಿದಂದಿನಿಂದ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಅದೇ ದಿನ ತಮ್ಮೊಳಗೆ ಒಪ್ಪಂದ ಮಾಡಿಕೊಂಡರು. ಯಾವುದೇ ಕಾರಣಕ್ಕೂ ಮುಂದೆ ಈ ಮಗುವಿಗೆ ನಾವು ನಿನ್ನ ನಿಜವಾದ ತಂದೆ ತಾಯಿಗಳು ಅನ್ನೋ ಸತ್ಯ ತಿಳಿಬಾರದು ಎಂದು. ರಾಮಪ್ಪನ ಪ್ರಾಣಸ್ನೇಹಿತ ಸೋಮಯ್ಯನನ್ನು ಬಿಟ್ಟರೆ ಈ ಸತ್ಯ ರಹಸ್ಯವಾಗಿಯೇ ಉಳಿದಿತ್ತು. ಶಶಾಂಕನನ್ನು ತಮ್ಮ ಸ್ವಂತ ಮಗನಿಗಿಂತಲೂ ಹೆಚ್ಚಾಗಿ ಪ್ರೀತಿಯಿಂದ ಸಾಕಿದರು. ಶಶಾಂಕನನ್ನು ಚೆನ್ನಾಗಿ ಓದಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೇರಿಕಾಕ್ಕೆ ಹೋಗುತ್ತೇನೆ ಎಂದಾಗ ಅವನ ಆಸೆಗೆ ಮಣಿದು, ತಮ್ಮ ಶಕ್ತಿ ಮೀರಿ ಆತನ ಭವಿಷ್ಯವನ್ನು ರೂಪಿಸುವಲ್ಲಿ ದಂಪತಿಗಳು ಶ್ರಮಿಸಿದರು. ಶಶಾಂಕನ ಓದು ಮುಗಿದು ಅಲ್ಲಿಯೇ ಕೆಲಸಕ್ಕೆ ಸೇರಿಕೊಂಡಾಗಲೂ ದಂಪತಿಗಳು ಅವನ ಆಸೆಗೆ ಅಡ್ಡಿಪಡಿಸಲಿಲ್ಲ. ಈಗ ಅವನ ವಿದ್ಯಾಭ್ಯಾಸವೂ ಮುಗಿದು, ಕೆಲಸಕ್ಕೆ ಸೇರಿ ಎರಡು ವರ್ಷವಾಗುತ್ತಾ ಬಂದಿದ್ದರಿಂದ ಅವನಿಗೆ ಒಂದು ಮದುವೆ ಮಾಡಿ ತಮ್ಮ ಜವಾಬ್ದಾರಿಯನ್ನು ಹಗುರ ಮಾಡಿಕೊಳ್ಳಬೇಕು, ಅಲ್ಲದೆ ತಮ್ಮ ಕಣ್ಮುಂದೇನೇ ಮಗ ಸಂಸಾರಸ್ಥನಾಗುವುದನ್ನು ಕಣ್ತುಂಬ ನೋಡಬೇಕೆಂಬುದು ವೃದ್ಧ ದಂಪತಿಗಳ ಆಸೆ.

ಶಶಾಂಕ್ ವಾರಕ್ಕೆ ಎರಡು ದಿನ ತಪ್ಪದೆ ತಂದೆ ತಾಯಿಗಳಿಗೆ ಫೋನ್ ಮಾಡಿ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದ. ರಾಮಪ್ಪನವರಿಗೆ ಹಣದ ಕೊರತೆ ಇರಲಿಲ್ಲ. ಅವರಿಗೆ ಬರುತ್ತಿದ್ದ ಪೆನ್ಸನ್ ಹಣದಿಂದ ಇಬ್ಬರ ಜೀವನ ಯಾವ ತಾಪತ್ರಯವಿಲ್ಲದೆ ಆರಾಮವಾಗಿ ಸಾಗುತ್ತಿತ್ತು. ಆದರೂ ಶಶಾಂಕ್ ತಿಂಗಳು ತಿಂಗಳು ಮನೆಗೆ ಹಣ ಕಳಿಸುತ್ತಿದ್ದ. ಎರಡು ವರ್ಷವಾದರೂ ಶಶಾಂಕ್ ಊರಿಗೆ ಬರುವ ಸುದ್ದಿಯೇ ಎತ್ತದಿದ್ದನ್ನು ಕಂಡು, ಎಲ್ಲಿ ತಮ್ಮ ಕನಸು ಕನಸಾಗಿಯೇ ಉಳಿಯುತ್ತದೋ ಎನ್ನುವ ಭಯದಿಂದ ರಾಮಪ್ಪನವರು ಮಗನ ಮದುವೆಯನ್ನು ಆದಷ್ಟು ಬೇಗನೆ ಮಾಡಿ ಮುಗಿಸಬೇಕು ಎನ್ನುವ ನಿರ್ಧಾರಕ್ಕೆ ಬಂದರು. ಮದುವೆಯ ನೆಪದಲ್ಲಿ ಮಗನೊಂದಿಗೆ ಈ ವೃದ್ಧಾಪ್ಯವನ್ನು ಕಳೆಯಬಹುದು ಎನ್ನುವ ಚಿಕ್ಕ ಆಸೆ ಅಷ್ಟೇ ಅವರಿಗೆ. ಆದರೆ ಊರಿಗೆ ಬರೋದೆಂದರೆ ಶಶಾಂಕನಿಗೆ ಉದಾಸೀನ. ಎಲ್ಲ ರೀತಿಯಿಂದಲೂ ಮುಂದುವರಿದಿರುವ ಅಮೇರಿಕಾದ ಜೀವನ ಶೈಲಿಗೆ ಅವನು ಈಗಾಗಲೇ ಒಗ್ಗಿಕೊಂಡಿದ್ದಾನೆ. ತನ್ನ ಊರಿನ ಜೀವನ ಶೈಲಿ ಅಷ್ಟೇನೂ ವಿಶೇಷ ಅನಿಸಲಿಲ್ಲ ಅವನಿಗೆ. ಕೈ ತುಂಬ ಹಣ ಸಂಪಾದಿಸುತ್ತಿದ್ದರೂ ಅವನಿಗೆ ತೃಪ್ತಿ ಅನ್ನೋದು ಇರಲಿಲ್ಲ. ಜೀವನದಲ್ಲಿ ಹಣವೇ ಮುಖ್ಯ ಅನ್ನೋ ವಿಚಾರ ಅವನದು. ಹಣವೊಂದಿದ್ದರೆ ಎಲ್ಲವನ್ನೂ ಕೊಂಡು ಕೊಳ್ಳಬಹುದೆಂಬ ಮನೋಭಾವ ಆತನದು.

ರಾಮಪ್ಪನವರಿಗೆ ಸುಮಾರು ಒಂದು ಎಕರೆಯಾಗುವಷ್ಟು ತೋಟವಿದೆ. ಪಿತ್ರಾರ್ಜಿತವಾಗಿ ಬಂದಿದ್ದ ಆಸ್ತಿಯನ್ನು ಮಾರಿ ತಾವಿದ್ದ ಊರಿನಲ್ಲಿ ತೋಟವನ್ನು ಖರೀದಿಸಿದ್ದರು. ಆ ತೋಟವಿರುವುದು ಅವರ ಬಾಲ್ಯದ ಸ್ನೇಹಿತ ಸೋಮಯ್ಯನ ಮನೆಯ ಪಕ್ಕದಲ್ಲಿ. ಸೋಮಯ್ಯನ ಮಗ ಪ್ರಶಾಂತ ಅಮೇರಿಕಾ ಸುತ್ತಲು ಹೋಗಿದ್ದರಿಂದ, ಸೋಮಯ್ಯ ಮತ್ತು ಆತನ ಹೆಂಡತಿ ತಮ್ಮ ಊರಿಗೆ ಹೋಗಿದ್ದರು. ಇದರಿಂದಾಗಿ ರಾಮಪ್ಪನವರಿಗೆ ತೋಟದ ಕಡೆ ಹೋಗಲು ಮನಸೇ ಆಗಲಿಲ್ಲ. ಎರಡು ದಿನದ ಹಿಂದೆಯೇ ಪ್ರಶಾಂತ ಹಿಂತಿರುಗಿ ಬಂದಿರುವ ವಿಷಯ ಗೊತ್ತಾಗಿದ್ದರಿಂದ, ಗೆಳೆಯ ಕೂಡ ಬಂದಿರಬಹುದು. ಅವನನ್ನು ಕೂಡ ನೋಡದೇ ತುಂಬಾ ದಿನಗಳಾಯಿತು, ಹಾಗಾಗಿ ಒಂದು ದಿನ ರಾಮಪ್ಪನವರು ತೋಟದ ಕಡೆಗೆ ಹೊರಟು ನಿಂತರು. ಕಾಲಿಗೆ ಚಪ್ಪಲಿ ಹಾಕಿಕೊಳ್ಳುತ್ತ ಪಂಕಜಳಿಗೆ ತಾನು ತೋಟದ ಕಡೆಗೆ ಹೋಗಿ ಬರುವುದಾಗಿ ತಿಳಿಸಿದರು. ಬಿಸಿಲೇರುವ ಮುನ್ನ ಮನೆಗೆ ಬನ್ನಿ ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.. ತೋಟದ ಕಡೆ ಹೋದರೆ ನಿಮಗೆ ಸಮಯದ ಪರಿವೇ ಇರುದಿಲ್ಲ. ಮತ್ತೆ ನನಗೇ ನಿಮ್ಮನ್ನು ಕರೆಯಲಿಕ್ಕೆ ಬರಬೇಕಾಗುತ್ತೆ ಎಂದು ಎಚ್ಚರಿಸಿದರು ಪಂಕಜಮ್ಮ.

ಹಾಂ.. ಹಾಂ. ಊಟದ ಸಮಯಕ್ಕೆ ಸರಿಯಾಗಿ ಬರುತ್ತೇನೆ.. ಮಾರಾಯ್ತಿ..

ನಿನ್ನ ರಾಮಾಯಣ ಶುರು ಮಾಡಬೇಡ ಎಂದು ನಗುತ್ತಾ ನುಡಿದರು ರಾಮಪ್ಪನವರು.

"ಅಂದ ಹಾಗೆ ಇವತ್ತು ಮಧ್ಯಾಹ್ನದ ಊಟಕ್ಕೆ ಒಂದೆಲಗದ ಗೊಜ್ಜು ಮಾಡು, ತುಂಬ ದಿನ ಆಯ್ತು ತಿನ್ನದೆ" ಎಂದರು.

"ಹೋದ ವಾರವಷ್ಟೇ ಮಾಡಿದ್ದೇನೆ. ತಿಂದದ್ದು ಮರೆತು ಬಿಟ್ಟಿರಾ.. ನೀವು ಮಾತನಾಡುವ ರೀತಿ ನೋಡಿದರೆ, ಹೋದ ವರ್ಷ ತಿಂದ ಹಾಗಿದೆ. ಆ ರೀತಿ ಮಾತನಾಡುತ್ತೀರಿ. ನಿಮಗೆ ಇಷ್ಟವಾದ ಪದಾರ್ಥ ಅಂತ ನನಗೆ ಗೊತ್ತು ಅದಕ್ಕೆ ವಾರಕ್ಕೆ ಒಂದು ಸಲವಾದರೂ ಮಾಡಿಯೇ ಮಾಡುತ್ತೇನೆ.. ಎಂದು ಹುಸಿ ನಗುತ್ತಾ ಒಳಹೋದರು.

ರಾಮಪ್ಪನವರು ಮಡದಿಯತ್ತ ಓರೆ ನೋಟ ಬೀರಿ, ನಗುಮೊಗದಿಂದ ಮನೆಯಿಂದ ತೆರಳಿದರು. ತೋಟದ ಪಕ್ಕದಲ್ಲಿ ಅವರ ಪ್ರಾಣಸ್ನೇಹಿತನ ಮನೆಯಿರುವುದರಿಂದ ರಾಮಪ್ಪನವರು ಯಾವಾಗಲೂ ತೋಟಕ್ಕೆ ಹೋಗುವುದಕ್ಕೆ ತುದಿಗಾಲಲ್ಲಿ ನಿಲ್ಲುತ್ತಿದ್ದರು. ಬಹುದಿನಗಳಿಂದ ಸೋಮಯ್ಯನನ್ನು ಬೆಟ್ಟಿಯಾಗಲಿಲ್ಲ. ಇವತ್ತು ಸಿಕ್ಕಿ ಮಾತನಾಡಬೇಕು ಎಂದು ಬಹು ಉತ್ಸಾಹದಿಂದ ತೋಟದ ಕಡೆ ಹೆಜ್ಜೆ ಹಾಕಿದರು. ಸೋಮಯ್ಯನು ಅಡಿಕೆಗೊನೆಯನ್ನು ಆಳಿನಿಂದ ಕಡಿಸುವುದರಲ್ಲಿ ನಿರತನಾಗಿದ್ದಾಗ, ಹಿಂದಿನಿಂದ ಬಂದ ರಾಮಪ್ಪನ ಸ್ವರವನ್ನು ಕೇಳಿ ಬೆಚ್ಚಿ ಬಿದ್ದನು. ಬಹು ದಿನಗಳ ನಂತರ ರಾಮಪ್ಪನನ್ನು ನೋಡಿ ಒಂದೆಡೆ ಖುಷಿಯಾದರೆ, ಇನ್ನೊಂದೆಡೆ ಇಷ್ಟು ದಿನ ಸ್ನೇಹಿತನನ್ನು ಎದುರುಗೊಳ್ಳಲು ಹಿಂಜರಿಯುತ್ತಿದ್ದ ಕಾರಣವನ್ನು ನೆನೆದು ಮನದಲ್ಲೇ ದುಃಖವತ್ತರಿಸಿ ಬರುತ್ತಿತ್ತು. ರಾಮಪ್ಪ ಏನಪ್ಪ ಸೋಮು ನನಗೆ ಈ ಕಡೆ ಬರಲಿಕ್ಕೆ ಆಗಲಿಲ್ಲ. ಆದರೆ ನೀನಾದರೂ ಬರಬೇಕಲ್ಲ. ಈ ಗೆಳೆಯನಿಗೆ ಸಿಗಬೇಕೆಂಬ ಆಸೆ ನಿನಗೆ ಬರಲೇ ಇಲ್ಲವೇ ಎಂದು ಹುಸಿಕೋಪದಿಂದ ಕೇಳಿದಾಗ, ಸೋಮಯ್ಯನಿಗೆ ಏನಾದರೊಂದು ನೆಪ ಒಡ್ಡಬೇಕೆಂದು ಯೋಚಿಸುವುದರಲ್ಲಿ ಅವನಿಗೆ ಅರಿವಿಲ್ಲದಂತೆ ಸೋಮಯ್ಯನ ಕಣ್ಣಲ್ಲಿ ನೀರಿಳಿಯಿತು. ಅದನ್ನು ಗಮನಿಸಿದ ರಾಮಪ್ಪ ಏನಪ್ಪ ಸೋಮು ನಾನು ನಿನಗೆ ತಮಾಷೆಯಾಗಿ ಹೇಳಿದ್ದು, ಬೇಸರ ಮಾಡಿಕೊಳ್ಳಬೇಡ. ನನಗೆ ಗೊತ್ತು ನೀನು ಯಾವುದೋ ಕೆಲಸದಲ್ಲಿ ವ್ಯಸ್ತನಾಗಿರಬೇಕು. ಇಲ್ಲದಿದ್ದರೆ ಈ ಬಾಲ್ಯ ಸ್ನೇಹಿತನನ್ನು ಮಾತನಾಡಿಸಲಿಕ್ಕೆ ಬರದೇ ಇರಲಾರೆ.

ಅದೆಲ್ಲ ಬಿಡು, ನಿನ್ನ ಮುಖ ಬಾಡಿ ಹೋಗಿರುವುದು ಏಕೆ? ನನ್ನನ್ನು ನೋಡಿದ ಮೇಲೂ ನಿನ್ನ ಮೊಗದಲ್ಲಿ ಮೊದಲಿನ ಸಂತಸವನ್ನು ನಾನು ಕಾಣಲಿಲ್ಲ. ಏನಾಯ್ತು? ಏನಾದರೂ ತೊಂದರೆಯೇ? ಹಣದ ಸಮಸ್ಯೆ ಇದೆಯೇ? ಹಾಂ.. ಹಾಗೆ ಪ್ರಶಾಂತ ಎಲ್ಲಿದ್ದಾನೆ ಈಗ. ಹೊರದೇಶದ ಟೂರ್ ಹೋಗಿದ್ದಾನೆ ಅಂದಿಯಲ್ಲ. ಯಾವಾಗ ಬರುತ್ತಾನೆ.. ಒಂದೇ ಸಮನೆ ಪ್ರಶ್ನೆಗಳ ಸುರಿಮಳೆ ಸುರಿಸಿದರು. ಆಗ ಸೋಮಪ್ಪ ಏನೂ ತೊಂದರೆಯಿಲ್ಲ. ನಿನ್ನಂತಹ ಪ್ರಾಣ ಸ್ನೇಹಿತ ನನ್ನೊಂದಿಗಿರುವಾಗ ನನಗ್ಯಾವ ಸಮಸ್ಯೆ? ಇಷ್ಟು ದಿನದ ಮೇಲೆ ನಿನ್ನನ್ನು ನೋಡಿದೆನಲ್ಲ ಅದಕ್ಕೆ ಸ್ವಲ್ಪ ಭಾವುಕನಾದೆ ಅಷ್ಟೆ.

ಅಂದ ಹಾಗೆ, ನಿನ್ನ ಮಗ ಶಶಾಂಕ್‌ನ ಬಗ್ಗೆ ಹೇಳು. ಏನು ಸಮಾಚಾರವಂತೆ. ಈಗಲಾದರೂ ನಿಮ್ಮೊಂದಿಗೆ ಇರಲು ವಾಪಾಸು ಬರುತ್ತಾನೋ ಇಲ್ಲವೋ? ಎಷ್ಟು ದಿನ ಅಂತ ನೀವಿಬ್ಬರು ಅವನನ್ನು ಬಿಟ್ಟು ಬದುಕುತ್ತೀರಿ. ನಿಮ್ಮ ನಂತರ ಈ ಆಸ್ತಿ–ಪಾಸ್ತಿಯನ್ನು ನೋಡಿಕೊಳ್ಳುವವರು ಬೇಕಲ್ಲವೇ? ಬೇಗ ಬರಲಿಕ್ಕೆ ಹೇಳು ಅವನಿಗೆ ಎಂದರು.

ಅದಕ್ಕೆ ರಾಮಪ್ಪ, ನಾನು ಅದನ್ನೇ ಯೋಚಿಸುತ್ತಿದ್ದೇನೆ, ಆದಷ್ಟು ಬೇಗ ಅವನಿಗೆ ಒಂದು ಮದುವೆ ಮಾಡಿ, ಅವನು ತನ್ನ ಭವಿಷ್ಯವನ್ನು ಇಲ್ಲಿಯೇ ಕಂಡುಕೊಳ್ಳಬೇಕೆಂಬ ಬಯಕೆ ನನ್ನದು. ಆದರೆ ಈಗಿನ ಕಾಲದ ಮಕ್ಕಳು. ಅವರಿಗೆ ಪ್ರಪಂಚದಲ್ಲಿರೋದೆಲ್ಲ ತನ್ನ ಕೈಯಲ್ಲಿರಬೇಕೆಂಬ ಆಸೆ. ನಾವು ಹೇಳಿದ್ದು ಕೇಳುವವರು ಯಾರು? ಎಂದು ವಿಷಾದದಿಂದ ನುಡಿದರು.

ಗೆಳೆಯನ ಮಾತನ್ನು ಕೇಳಿ ಸೋಮಯ್ಯನ ಕಣ್ಣು ತುಂಬಾ ನೀರು ತುಂಬಿಕೊಂಡಿತು. ಯಾವ ಬಾಯಿಯಿಂದ ಇವನಿಗೆ ನಿಜ ಹೇಳಲಿ? ಯಾವ ಮಗನೊಂದಿಗೆ ಕೂಡಿ ಬಾಳಬೇಕೆಂಬ ನೂರಾರು ಕನಸುಗಳನ್ನು ಕಟ್ಟಿಕೊಂಡಿದ್ದೇನೋ ಅವನು ಈಗಾಗಲೇ ಅಮೇರಿಕಾದ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿದ್ದಾನೆ. ಅಲ್ಲಿಯ ನಾಗರಿಕತ್ವದ ಹಕ್ಕನ್ನು ಪಡೆದುಕೊಂಡಿದ್ದಾನೆ. ತನ್ನ ಹುಟ್ಟೂರಿಗೆ ಬರಬೇಕೆಂಬ ಆಸೆ ಅವನಲ್ಲಿ ಲವಲೇಶವೂ ಇಲ್ಲ. ಇಂಥ ಚಿನ್ನದಂಥ ತಂದೆ ತಾಯಿಯರಿಗೆ ದ್ರೋಹ ಬಗೆದ ಆ ಮಗನ ಬಗ್ಗೆ ಏನು ಹೇಳಲಿ. ಒಂದಲ್ಲ ಒಂದು ದಿನ ಈ ಸತ್ಯ ಇವನಿಗೆ ತಿಳಿದೇ ತಿಳಿಯುತ್ತದೆ. ಎಷ್ಟು ದಿನ ಅಂತ ಸ್ನೇಹಿತನಿಂದ ಈ ವಿಷಯವನ್ನು ಮುಚ್ಚಿಡಲಿ ಎಂದು ಸೋಮಯ್ಯ ಒಳಗೊಳಗೆ ಗೆಳೆಯನಿಗಾಗಿ ಕೊರಗಿದನು.

ಏ ರಾಮು ನಿನ್ನಲ್ಲಿ ಮಾತು ಹೇಳಲಿಕ್ಕಿದೆ, ಹೇಳಲಾ?

ಅರೆ... ಸೋಮು, ನಿನಗೆ ಯಾವತ್ತು ನನ್ನೊಂದಿಗೆ ಮಾತನಾಡಲಿಕ್ಕೆ ಪರವಾನಿಗಿ ಬೇಕಾಗಿದ್ದು? ಮುಜುಗರ ಪಡದೆ ಹೇಳು ಎಂದನು.

ಅದಕ್ಕೆ ಸೋಮು, ರಾಮು ಒಂದು ವೇಳೆ ನಿನ್ನ ಮಗನು ಅಲ್ಲಿಯ ಹುಡುಗಿಯನ್ನು ಮದುವೆಯಾಗಿ ಅಲ್ಲಿಯೇ ನೆಲೆನಿಂತರೆ ಏನು ಮಾಡುತ್ತೀಯಾ?

ಏಯ್ ಸೋಮು, ನನ್ನ ಮಗ ಅಂಥವನಲ್ಲ, ನಮ್ಮನ್ನು ಈ ಇಳಿ ವಯಸ್ಸಿನಲ್ಲಿ ಯಾವತ್ತೂ ಒಂಟಿಯಾಗಿ ಬಿಟ್ಟುಬಿಡಲಾರ, ನನಗೆ ನನ್ನ ಮಗನ ಮೇಲೆ ನಂಬಿಕೆಯಿದೆ ಎಂದು ಆತ್ಮವಿಶ್ವಾಸದಿಂದ ಹೇಳಿದನು.

ಮಗನ ಮೇಲಿದ್ದ ಸ್ನೇಹಿತನ ಆತ್ಮವಿಶ್ವಾಸವನ್ನು ನೋಡಿ ಸೋಮಯ್ಯ ಮಮ್ಮಲ ಮರುಗಿದನು. ಕೊನೆಗೆ ದಾರಿ ಕಾಣದೆ, ತನ್ನ ಮಗ ಪ್ರಶಾಂತ ಅಮೇರಿಕಾದ ಟೂರ್‌ನಲ್ಲಿ ತಿಳಿದ ಸತ್ಯವನ್ನು ಸ್ನೇಹಿತನ ಮುಂದೆ ಬಿಚ್ಚಿಟ್ಟನು.

ಇದನ್ನು ಕೇಳಿ ರಾಮಪ್ಪನಿಗೆ ತಾನು ನಿಂತ ನೆಲ ಕಂಪಿಸಿದ ಅನುಭವವಾಯಿತು. ತಾವು ಸಾಕಿ ಬೆಳೆಸಿದ ಮಗನು ಇಷ್ಟು ದೊಡ್ಡ ಸತ್ಯವನ್ನು ನಮ್ಮಿಂದ ಮುಚಿಟ್ಟನೆ? ನಮ್ಮಿಂದ ಏನು ಅಂತಹ ಮಹಾಪರಾಧವಾಯಿತು. ನಮಗೆ ತಿಳಿಸದೆ ಮದುವೆಯಾದನೆ? ನಾನು ಮದುವೆಯಾಗುತ್ತಿದ್ದೇನೆ ಅಂತ ಒಂದು ಮಾತು ಹೇಳಿದರೂ ನಾವು ಅವನ ಆಸೆಗೆ ಅಡ್ಡಿಪಡಿಸುತ್ತಿರಲಿಲ್ಲ. ಮಗನ ಮದುವೆಯ ಬಗ್ಗೆ ಆಶಾಗೋಪುರವನ್ನೇ ಕಟ್ಟಿಕೊಂಡಿದ್ದ ಪಂಕುಗೆ ಏನು ಹೇಳಲಿ? ಮಗನಲ್ಲಿ ಜೀವವನ್ನೇ ಇಟ್ಟುಕೊಂಡಿದ್ದ ಅವಳಿಗೆ ಈ ಸತ್ಯ ಗೊತ್ತಾದರೆ ಹೇಗೆ ಸಹಿಸಿಯಾಳು? ಎಂದು ನೋವಿನಿಂದ ಅತ್ತರು.

ರಾಮು, ಸಮಾಧಾನ ಮಾಡಿಕೊ, ಈಗಿನ ಕಾಲದಲ್ಲಿ ಹೆತ್ತ ಮಕ್ಕಳೆ ತಮ್ಮ ತಂದೆತಾಯಿಯರನ್ನು ನೋಡಿಕೊಳ್ಳುವುದಿಲ್ಲ. ಇನ್ನು ಸಾಕಿದ ಮಕ್ಕಳು ನೋಡಿಯಾರೆ? ಬಿಟ್ಟುಬಿಡು, ದುಃಖಿಸಿ ಏನೂ ಫಲವಿಲ್ಲ. ನಿನ್ನ ಮಗ ನಿನ್ನ ಕೈಯಿಂದ ಜಾರಿಯಾಗಿದೆ. ಮುಂದೆ ಒಂದಲ್ಲ ಒಂದು ದಿನ ಅವನಿಗೆ ತನ್ನ ತಪ್ಪಿನ ಪ್ರಾಯಶ್ಚಿತವಾಗುತ್ತದೆ. ಬೇಸರಪಡಬೇಡ. ನೀನೇ ಹೀಗೆ ದುಃಖಪಟ್ಟರೆ ಇನ್ನು ಪಂಕಜಕ್ಕನನ್ನು ಹೇಗೆ ಸಮಾಧಾನಿಸ್ತಿಯಾ? ದುಃಖಿಸಬೇಡ, ಮನೆಗೆ ಹೋಗಿ ಪಂಕಜಕ್ಕನಿಗೆ ವಿಷಯ ತಿಳಿಸು ಎಂದು ಸ್ನೇಹಿತನನ್ನು ಭಾರದ ಮನದಿಂದ ಬೀಳ್ಕೊಟ್ಟರು.

ಸುಡು ಬಿಸಿಲಿನಲ್ಲಿ ಮನೆಯತ್ತ ತೆರಳಿದ ರಾಮಪ್ಪನವರಿಗೆ ಮನದಲ್ಲಿ ಆಗುತ್ತಿದ್ದ ನೋವಿನ ಬಿಸಿಗೆ ಹೊರಗಿನ ಸೂರ್ಯನ ಬಿಸಿ ಮುಟ್ಟಲೇ ಇಲ್ಲ. ಯಾವುದರ ಪರಿವೇ ಇಲ್ಲದೆ ಮನೆಯನ್ನು ತಲುಪಿದರು. ಪತಿಯ ಬರುವಿಕೆಯನ್ನು ಕಂಡ ಪಂಕಜಮ್ಮ ತಣ್ಣಗಿನ ಮಜ್ಜಿಗೆಯನ್ನು ತಂದು ಟೇಬಲಿನ ಮೇಲಿಟ್ಟರು. ಹೊರಗಡೆಯಿಂದ ಬಂದವರು ಯಾವತ್ತೂ ಬಾವಿಕಟ್ಟೆಯಲ್ಲಿ ಕಾಲನ್ನು ತೊಳೆದೇ ಮನೆ ಒಳಗೆ ಬರುತ್ತಿದ್ದ ಪತಿ ಇವತ್ತ್ಯಾಕೋ ಹಾಗೇನೇ ಮನೆ ಒಳಗೆ ಬರುತ್ತಿರುವುದನ್ನು ಕಂಡು ಆಶ್ಚರ್ಯದಿಂದ ನೋಡಿದರು. ಬಿಸಿಲಿನ ಝಳಪಿಗೆ ಸುಸ್ತಾಗಿ ಮುಖ ಬಾಡಿದ ಹಾಗೆ ಇದೆ. ಬೇಗನೇ ಊಟಕ್ಕೆ ಬಡಿಸುತ್ತೇನೆ. ಅಲ್ಲಿಯವರೆಗೆ ಈ ಮಜ್ಜಿಗೆಯನ್ನು ಕುಡಿಯಿರಿ ಎಂದು ಮಜ್ಜಿಗೆ ಲೋಟವನ್ನು ಅವರ ಮುಂದಿಟ್ಟರು ಪಂಕಜಮ್ಮ. ರಾಮಪ್ಪನವರು ಹೆಂಡತಿಯ ಕೈ ಹಿಡಿದು ಮಗ್ಗುಲಲ್ಲಿ ಕುಳ್ಳಿರಿಸಿದರು. ನಿನ್ನೊಂದಿಗೆ ಬಹಳ ಮುಖ್ಯವಾದ ವಿಷಯ ಮಾತನಾಡಲಿಕ್ಕಿದೆ ಎಂದರು. ಅದಕ್ಕೆ ಪಂಕಜಮ್ಮ ನಿಮಗಿಷ್ಟವಾದ ಒಂದೆಲಗದ ಗೊಜ್ಜಿಗಿಂತ ಅಂತಹ ಮುಖ್ಯವಾದ ಕೆಲಸವೇನಿದೆ ಎಂದು ನಗುತ್ತಾ ನುಡಿದರು. ಆದರೆ ಪತಿಯ ಮುಖದ ಕಳೆಯೇ ಮಾಯವಾಗಿರುವುದನ್ನು ನೋಡಿ ಏನೋ ಗಂಭೀರವಾದ ವಿಷಯವಿರಬೇಕೆಂದು ತಿಳಿದು, ಹೇಳಿ, ಅದೇನು ಮುಖ್ಯವಾದ ವಿಷಯ? ಎಂದು ಪತಿಯ ಪ್ರತಿಕ್ರಿಯೆಗಾಗಿ ಕಾದುಕುಳಿತರು. ಅದಕ್ಕೆ ರಾಮಪ್ಪನವರು, ಪಂಕು ನಿನ್ನ ಮನಸ್ಸನ್ನು ಗಟ್ಟಿ ಮಾಡಿಕೋ, ನಮ್ಮ ಮಗನಿಗೆ ನಾವು ಬೇಡವಾದೆವು. ನಮಗೆ ತಿಳಿಸದೇ ಅವನು

ಅಲ್ಲಿಯ ಹುಡುಗಿಯನ್ನು ಮದುವೆಯಾಗಿದ್ದಾನೆ. ಅಲ್ಲಿಯ ನಾಗರಿಕತ್ವವನ್ನು ಪಡೆದು ಅಲ್ಲಿಯೇ ನೆಲೆ ನಿಲ್ಲುವ ತೀರ್ಮಾನ ಕೈಗೊಂಡಿದ್ದಾನೆ. ಪತಿಯ ಮುಖವನ್ನೊಮ್ಮೆ ನೋಡಿ, ಸೀದಾ ಒಳಗೆದ್ದು ಹೋದರು. ಮಲಗುವ ಕೋಣೆಯಿಂದ ಒಂದು ಲಕೋಟೆಯನ್ನು ತಂದು ಪತಿಯ ಕೈಗಿತ್ತರು. ರಾಮಪ್ಪ ಒಮ್ಮೆ ಪತ್ನಿಯ ಮುಖವನ್ನು ಇನ್ನೊಮ್ಮೆ ತನ್ನ ಕೈಯಲ್ಲಿದ್ದ ಲಕೋಟೆಯನ್ನು ನೋಡಿದರು. ಓದಿ, ನಮ್ಮ ಮಗ ನಮಗೆ ಬರೆದ ಕೊನೆಯ ಕಾಗದ. ಕಾಗದವನ್ನು ಒಡೆದು ಓದ ಹತ್ತಿದರು..

ಪ್ರೀತಿಯ ತಂದೆ ತಾಯಿಗಳಿಗೆ ನಿಮ್ಮ ಶಶಾಂಕನ ಪ್ರಣಾಮಗಳು. ನಾನು ಇಲ್ಲಿ ಕ್ಷೇಮ. ನೀವು ಅಲ್ಲಿ ಕ್ಷೇಮದಿಂದಿರುತ್ತೀರಿ ಎಂದು ನಂಬಿರುವೆ. ನಾನು ಇಲ್ಲಿಯ ಹುಡುಗಿಯೊಂದನ್ನು ಪ್ರೀತಿಸಿ ಮದುವೆಯಾಗಿದ್ದೇನೆ. ನಾನು ಭಾರತಕ್ಕೆ ಬರುತ್ತಿದ್ದೇನೆ ಎಂದು ನಿರೀಕ್ಷಿಸಬೇಡಿ. ನಿಮ್ಮ ಕಾಲದ ಹಾಗೆ ಅಲ್ಲ, ಈಗಿನ ಕಾಲದಲ್ಲಿ ಎಷ್ಟು ಸಂಪಾದಿಸಿದರೂ ಕಡಿಮೆ. ಊರಿನಲ್ಲಿ ಪಪ್ಪನಿಗೆ ಪೆನ್ಸನ್ ಹಣ ಬರುತ್ತಿರುವುದರಿಂದ ನಿಮ್ಮ ಜೀವನವನ್ನು ಸಾಗಿಸಲು ನಿಮಗೆ ಕಷ್ಟವಾಗಲಿಕ್ಕಿಲ್ಲ. ಹಣ ಬೇಕಿದ್ದರೆ ತಿಳಿಸಿ, ಕಳುಹಿಸಿಕೊಡುತ್ತೇನೆ, ನನಗೆ ಮಾತ್ರ ಬರಲಿಕ್ಕೆ ಹೇಳಬೇಡಿ. ರೋಸಿಯನ್ನು ಕರೆದುಕೊಂಡು ನಮ್ಮ ಊರಿಗೆ ಬರಲು ಸಾಧ್ಯವಿಲ್ಲದ ಮಾತು. ರೋಸಿ ಒಬ್ಬಳನ್ನೇ ಬಿಟ್ಟು ಬರಲಿಕ್ಕೆ ಆಗುವುದಿಲ್ಲ. ನಿಮಗೆ ಹೇಳದೇ ಮದುವೆಯಾಗಿದ್ದಕ್ಕೆ ಕ್ಷಮೆಯಿರಲಿ..

ಇತೀ ನಿಮ್ಮವನೆ ಶಶಾಂಕ್

ಪತ್ರವನ್ನು ಓದಿ ಮುಗಿಸಿದ ಮೇಲೆ ಹೆಂಡತಿಯತ್ತ ಬಲು ಹೆಮ್ಮೆಯಿಂದ ತುಂಬಿದ ಕಣ್ಣುಗಳಿಂದ ಒಂದೇ ಸಮನೆ ನೋಡ ಹತ್ತಿದರು. ಅದಕ್ಕೆ ಪಂಕಜಮ್ಮ ಕಣ್ಣಿಂದ ಹರಿಯುತ್ತಿರುವ ನೀರನ್ನು ಸೆರಗಂಚಿನಿಂದ ಒರೆಸಿಕೊಳ್ಳುತ್ತಾ, ಹಾಗೆ ನನ್ನನ್ನು ನೋಡಬೇಡಿ. ಮಗನ ಮದುವೆಯ ಬಗ್ಗೆ ನೂರಾರು ಕನಸುಗಳನ್ನು ನನ್ನಂತೆ ನೀವು ಕೂಡ ಕಟ್ಟಿಕೊಂಡವರು. ಈ ವಿಷಯ ಕೇಳಿ ನಿಮಗೆಲ್ಲಿ ನೋವಾಗುತ್ತದೋ ಅಂತ ಈ ವಿಷಯವನ್ನು ಮುಚ್ಚಿಟ್ಟೆ. ಸುಮಾರು ಒಂದು ತಿಂಗಳ ಹಿಂದೆ ಈ ಪತ್ರ ಬಂದಿತ್ತು. ಇದನ್ನು ಓದಿ ನಿಮಗೆಲ್ಲಿ ನೋವಾಗುತ್ತದೋ ಅಂತ ನಿಮಗೆ ತಿಳಿಸಲೇ ಇಲ್ಲ. ನಿಮ್ಮ ಗೆಳೆಯ ಸೋಮಯ್ಯ ಇಷ್ಟು ದಿನವಾದರೂ ಈ ಕಡೆ ಯಾಕೆ ತಲೆ ಹಾಕಲಿಲ್ಲ ಅನ್ನೋದು ನನಗೆ ಗೊತ್ತು. ಪ್ರಶಾಂತನಿಂದ ವಿಷಯ ತಿಳಿದ ಮೇಲೆ ನಿಮ್ಮನ್ನು ಎದುರಿಸುವ ಶಕ್ತಿ ಅವರಿಲ್ಲ. ಇವತ್ತು ನಿಮ್ಮ ಮುಂದೆ ಎಲ್ಲ ಸತ್ಯವನ್ನು ಬಿಚ್ಚಿಟ್ಟು ಮನಸ್ಸು ಶಾಂತ ಮಾಡಿಕೊಂಡಿರಬೇಕು. ಏಷ್ಟೇ ಆಗಲಿ ನಿಮ್ಮ ಸ್ನೇಹಿತ ತಾನೇ? ಇನ್ನು ಶಶಾಂಕ್ ನಮಗೆ ಹೇಳದೆ ಮದುವೆಯಾಗಿರುವುದಕ್ಕೆ ನಾವು ಬೇಸರಪಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಶಶಾಂಕ್ ಎಲ್ಲೆ ಇರಲಿ, ಅವನು ಸಂತೋಷದಿಂದ ಇದ್ದಾನಲ್ಲ. ನಮಗೆ ಅಷ್ಟೇ ಸಾಕು. ಬಹುಶಃ ನಾವು ಎಲ್ಲ ತಂದೆ ತಾಯಿಗಳಿಗಿಂತ ನಮ್ಮ ಮಗನಿಂದ ಬಹಳ ಜಾಸ್ತಿಯನ್ನೇ ಅಪೇಕ್ಷಿಸಿದ್ದೇವೋ ಏನೋ?, ನಾವು ಇವತ್ತೋ ನಾಳೆನೋ ಬಿದ್ದು ಹೋಗುವ ಮರಗಳು. ಅವನಿನ್ನೂ ಬಾಳಿ ಬದುಕಬೇಕಾದ್ದು ತುಂಬಾ ಇದೆ. ಅದಕ್ಕೆ ಅವನ ಖುಷಿಯಲ್ಲಿ ನನ್ನ ಖುಷಿಯನ್ನು ಕಂಡೆ. ಬಂಜೆ ಅನ್ನೋ ಪಟ್ಟದಿಂದ ತಾಯಿಯ ಪಟ್ಟಕ್ಕೆ ಏರಿಸಿದ ಅವನ ಋಣ ಇನ್ನೂ ನನ್ನ ಮೇಲಿದೆ ಎಂದು ಭಾವುಕತೆಯಿಂದ ನುಡಿದರು. ನನ್ನನ್ನು ಕ್ಷಮಿಸಿ ಈ ವಿಷಯವನ್ನು ನಿಮ್ಮಿಂದ ಮುಚ್ಚಿಟ್ಟೆ. ನನ್ನಿಂದ ಮಹಾಪರಾಧವಾಯಿತು ಎಂದು ಕಣ್ಣೀರುಡುತ್ತಾ ಪತಿಯ ಕಾಲಿಗೆರಗಿದರು. ಕಾಲಿಗೆ ಬಿದ್ದ ಪತ್ನಿಯನ್ನು ಪ್ರೀತಿಯಿಂದ ಮೇಲೆಕ್ಕೆತ್ತಿ ತಬ್ಬಿಕೊಂಡು ತಲೆ ನೇವರಿಸಿದರು. ಇಷ್ಟು ದೊಡ್ಡ ನೋವನ್ನು ತನ್ನೊಳಗೆ ಇಟ್ಟುಕೊಂಡು ಕೊರಗುತ್ತಿದ್ದೀಯಾ ಪಂಕು. ನಿನ್ನ ಪತಿ ಗಟ್ಟಿ ಜೀವ ಹೆದರಬೇಡ. ನಿನ್ನೊಳಗಿರುವ ನೋವನ್ನು ನಾನು ಗುರುತಿಸದಾದೆ, ನನ್ನನ್ನು ದಯವಿಟ್ಟು ಕ್ಷಮಿಸು. ನಿನ್ನಂತ ಪತ್ನಿಯನ್ನು ಪಡೆದ ನಾನು ಧನ್ಯ. ಇಂತಹ ಮಹಾತಾಯಿಯ ವಾತ್ಸಲ್ಯವನ್ನೇ ಧಿಕ್ಕರಿಸಿದನೇ ಶಶಾಂಕ್? ಇದರಲ್ಲಿ ಅವನ ತಪ್ಪಿಲ್ಲ. ನಾವು ಕೊಟ್ಟ ಸಂಸ್ಕಾರವೇ ಸರಿಯಿಲ್ಲ. ತಂದೆ ತಾಯಿಯ ಪಟ್ಟಕ್ಕೆ ನಾವು ಅರ್ಹರಲ್ಲವೆಂದು ಆ ಭಗವಂತ ಮೊದಲೇ ನಿರ್ಧರಿಸಿದ್ದಾನೆ, ಅವನ ತೀರ್ಪಿಗೆ ನಾವು ವಿರುದ್ಧವಾಗಿ ನಡೆದುಕೊಂಡಿದ್ದಕ್ಕೆ ನಮಗೆ ಬಹುಶಃ ಈ ಗತಿ ಬಂದಿರಬಹುದು ಎಂದು ರಾಮಪ್ಪ ಗದ್ಗದಿತರಾಗಿ ನುಡಿದರು.

ಅದಕ್ಕೆ ಪಂಕಜಮ್ಮ, ಇಲ್ಲ ರೀ ಹಾಗೆ ನುಡಿಯಬೇಡಿ. ಹಿಂದಿನ ಜನ್ಮದಲ್ಲಿ ನಾವು ಮಾಡಿದ ಯಾವುದೋ ಪಾಪಕ್ಕೆ ಭಗವಂತ ಈ ಶಿಕ್ಷೆಯನ್ನು ನಮಗೆ ಕೊಟ್ಟಿದ್ದಾನೆ. ಎಲ್ಲವನ್ನು ಮರೆತು ಬಿಡಿ. ನನಗೆ ನೀವು, ನಿಮಗೆ ನಾನು. ಮತ್ತೇನು ಬೇಕು ನಮಗೆ? ಜಗತ್ತಿನಲ್ಲಿ ನಮಗಿಂತ ಕಷ್ಟದಲ್ಲಿರುವವರು ಎಷ್ಟೋ ಮಂದಿ ಇದ್ದಾರೆ. ಅವರೆಲ್ಲ ಬದುಕುತ್ತಿಲ್ಲವೇ? ನಾವು ಒಂದು ಅನಾಥ ಮಗುವನ್ನು ದತ್ತು ಪಡೆದು ಸಾಕಿ ಸಲಹಿದ್ದನ್ನು ಒಂದು ಒಳ್ಳೆಯ ಸಿಹಿ ಕನಸೆಂದು ತಿಳಿದು ಮರೆತು ಬಿಡೋಣ. ಬಹುಶಃ ಇದೇ ಭಗವಂತ ಇಚ್ಛೆ ಇರಬೇಕೆಂದು ನಗುನಗುತ್ತಾ ಈ ಬಾಳನ್ನು ಸ್ವೀಕಾರ ಮಾಡೋಣ ಎಂದು ನುಡಿದ ಪಂಕಜಮ್ಮನ ಮಾತಿಗೆ, ರಾಮಪ್ಪನವರು ನಾನು ಇಲ್ಲಿಯತನಕ ನನ್ನ ವಿದ್ಯಾರ್ಥಿಗಳಿಗೆ ತಮ್ಮ ಜೀವನವನ್ನು ಹೇಗೆ ರೂಪಿಸಿಕೊಳ್ಳಬಹುದೆಂದು ಕೇವಲ ನಕ್ಷೆಯನ್ನು ತೋರಿಸಿದೆ. ಇವತ್ತು ಒಬ್ಬ ಪ್ರಾಧ್ಯಾಪಕನಿಗೆ ಬದುಕನ್ನು ಹೇಗೆ ಸ್ವೀಕಾರ ಮಾಡಬೇಕು ಎಂಬ ಬಹಳ ಮಹತ್ತರವಾದ ಪಾಠವನ್ನು ಕಲಿಸಿದೆ. ಈ ಗುರುವಿಗೆ ಗುರು ನೀನು ಎಂದು ಭಾವುಕತೆಯಿಂದ ಮಡದಿಗೆ ತಲೆಬಾಗಿಸಿದರು.

ಹೀಗೆ ದಿನಗಳುರುಳಿದವು, ಸುಮಾರು ಎರಡು ತಿಂಗಳು ಕಳೆದಿರಬಹುದು. ಅಚಾನಕ್ಕಾಗಿ ಮನೆಯ ಮುಂದೆ ಬಂದು ನಿಂತ ಕಾರನ್ನು ನೋಡಿ ದಂಪತಿಗಳು ಹೊರಬಂದರು. ಕಾರಿನಿಂದ ಬಬ್ಬ ವ್ಯಕ್ತಿ ಹಾಗೂ ಒಂದು ಹೆಂಗಸು ತಮ್ಮ ಮನೆ ಕಡೆಗೆ ನಡೆದು ಬರುತ್ತಿರುವುದನ್ನು ಕಂಡು ಆಶ್ಚರ್ಯದಿಂದ ಬೆರಗಾಗಿ ಅವರನ್ನೇ ನೋಡ ಹತ್ತಿದರು. ಆ ಇಬ್ಬರೂ ಅಪರಿಚಿತರು ಬಂದು ಇವರ ಕಾಲಿಗೆರಗಿದ ಮೇಲೇನೆ ದಂಪತಿಗಳಿಗೆ ಗೊತ್ತಾಗಿದ್ದೂ. ಆ ಅಪರಿಚಿತರು ಬೇರ್‍ಯಾರು ಅಲ್ಲ ತಮ್ಮ ಮಗ ಶಶಾಂಕ್ ಮತ್ತು ಸೊಸೆ ರೋಸಿ ಎಂದು. ಆ ಕ್ಷಣಕ್ಕೆ ತಮ್ಮೆಲ್ಲ ನೋವುಗಳನ್ನು ಮರೆತು, ಸಂತೋಷದಿಂದ ಮಗನನ್ನು ತಬ್ಬಿಕೊಂಡು, ಅವರಿಬ್ಬರನ್ನು ಮನೆಯೊಳಗೆ ಬರಮಾಡಿಕೊಂಡರು. ಪಪ್ಪ ನನ್ನನ್ನು ಕ್ಷಮಿಸಿ. ನಿಮಗಿಬ್ಬರಿಗೂ ಎಷ್ಟೊಂದು ನೋವು ಕೊಟ್ಟೆ. ನಿಮ್ಮಂತಹ ತಂದೆ ತಾಯಿಗಳಿಗೆ ಮಗನಾಗುವ ಯೋಗ್ಯತೆ ನನ್ನಲ್ಲಿಲ್ಲ. ಎಲ್ಲೋ ಅನಾಥಶ್ರಮದಲ್ಲಿ ಬೆಳೆಯುತ್ತಿದ್ದ ನನ್ನನ್ನು ತಂದು ಸಾಕಿ ನನಗೆ ಒಳ್ಳೆಯ ಭವಿಷ್ಯವನ್ನು ರೂಪಿಸಿಕೊಟ್ಟವರು ನೀವು. ನಿಮ್ಮಂತಹ ತಂದೆ ತಾಯಿಯನ್ನು ಪಡೆದ ನಾನೇ ಧನ್ಯ. ಇಂತಹ ಮಹಾನ್ ತಂದೆತಾಯಿಯರನ್ನು ದಿಕ್ಕರಿಸಿ ಹೊರಟಿದ್ದವನನ್ನು ಸೋಮು ಅಂಕಲ್ ನನ್ನ ಕಣ್ಣು ತೆರೆಸಿದರು. ನನ್ನ ಕಣ್ಣಿಗೆ ಬಳಿದಿದ್ದ ಹಣದ ಪೊರೆಯಿಂದ ಮುಕ್ತರನ್ನಾಗಿಸಿದರು. ನಿಮ್ಮ ತ್ಯಾಗಕ್ಕೆ ನಾನು ಬೆಲೆ ಕಟ್ಟಲಾರೆ ಎಂದು ಕಣ್ಣೀರುಡುತ್ತಾ ತಂದೆಯನ್ನು ತಬ್ಬಿಕೊಂಡನು.

ಅದಕ್ಕೆ ರಾಮಪ್ಪನವರು ನೋಡು ಮಗು, ತಪ್ಪು ಮಾಡುವುದು ಸಹಜ, ಪಶ್ಚಾತ್ತಾಪವೇ ಅದಕ್ಕಿರುವ ನಿಜವಾದ ಶಿಕ್ಷೆ. ನಿನಗೆ ನಿನ್ನ ತಪ್ಪಿನ ಅರಿವಾಗಿದೆಯಲ್ಲವೇ ನಮಗೆ ಅಷ್ಟೇ ಸಾಕು ಎಂದರು.

ಅವರೊಂದಿಗೆ ನನ್ನನ್ನು ಕ್ಷಮಿಸಿಬಿಡು ಎಂದು ಒಳಬಂದ ಸೋಮಯ್ಯನನ್ನು ಆತ್ಮೀಯತೆಯಿಂದ ತಬ್ಬಿಕೊಂಡರು ರಾಮಪ್ಪ. ರಾಮು ಪಂಕು ನೀವಿಬ್ಬರೂ ಇಲ್ಲಿಯ ತನಕ ಕಾಪಾಡಿಕೊಂಡು ಬಂದಿದ್ದ ರಹಸ್ಯವನ್ನು ನಿಮ್ಮ ಮಗನಿಗೆ ಹೇಳಲೇಬೇಕಾಯ್ತು. ನಿಮ್ಮಿಬ್ಬರ ನೋವನ್ನು ನನ್ನಿಂದ ನೋಡಲಿಕ್ಕೆ ಆಗಲಿಲ್ಲ. ಅದಕ್ಕೆ ಶಶಾಂಕನಿಗೆ ಕಾಗದ ಬರೆಯಬೇಕಾಯಿತು ಎಂದರು. ಕೃತಜ್ಞತಾ ಭಾವದಿಂದ ಸ್ನೇಹಿತನತ್ತ ದೃಷ್ಟಿ ಬೀರಿದ ರಾಮಪ್ಪನವರು ಸೊಸೆಯತ್ತ ನೋಡಿದರು. ಅವಳಿಗೆ ಇವರಾಡುವ ಭಾಷೆ ಅರ್ಥವಾಗದಿದ್ದರೂ ಮುಗುಳ್ನಗುತ್ತಾ ನಿಂತಿದ್ದಳು. ಶಶಾಂಕನ ಮನೆಯ ಸುತ್ತಮುತ್ತಲಿನ ಹಚ್ಚಹಸುರಿನ ತಾಣದ ಸೊಬಗಿಗೆ ಅವಳು ಮರುಳಾಗಿದ್ದಳು. ಅಂಗಳದಲ್ಲಿದ್ದ ಬೆಕ್ಕು, ನಾಯಿ, ಕೋಳಿಗಳನ್ನು ನೋಡಿ ಹರ್ಷ ಪಡುತ್ತಿದ್ದ ಆಕೆ ಮುಗ್ಧ ಮಗುವಿನಂತೆ ಕಂಡಳು. ಪಂಕಜಮ್ಮ ಒಳಹೋದವರೇ ಆರತಿ ತಟ್ಟೆ ತಂದು ಆರತಿ ಬೆಳಗಿ ಮಗ–ಸೊಸೆಯನ್ನು ಆನಂದದಿಂದ ಮನೆತುಂಬಿಸಿಕೊಂಡರು. ಹಿರಿಯರ ಕಾಲಿಗೆರಗಿದ ಶಶಾಂಕ್ ತಂದೆತಾಯಿಯರನ್ನು ಬಿಗಿದಪ್ಪಿದ. ಕಣ್ಣೀರು ಕೋಡಿಯಾಗಿ ಹರಿಯಿತು. ಹಣ, ಅಧಿಕಾರದಿಂದ ಮಬ್ಬು ಕವಿದಿದ್ದ ವಾತಾವರಣವು ತಿಳಿಯಾಗಿ ಶುಭ್ರವಾಯಿತು...

**– ಡಾ. ಜ್ಯೋತಿ ಸತೀಶ್**

# INTERNATIONAL YOGA DAY CELEBRATION IN INDIA AND ABROAD


**(21st June every year)**

**Health is wealth. Peace of mind is happiness and yoga shows the way.**

**-By Swami Vishnudevananda**

Yoga speaks about purification of the body, mind and soul. The only way to experience true wellbeing is to turn inward through yoga.

Someone asked me a question, why do we need International yoga day? I gave a thought to this question. Around the world we see terrorism, disharmony, there is no peace or unity and people lead stressful life. Yoga brings self discipline; it plays a role in creating positive energy. Yoga is good for the betterment of people and to live in a stress-free world. Yoga plays a major role in bringing peace, unity and harmony amongst the people.




**Background of International Yoga Day**

The Indian Prime Minister, Narendra Modi had given a proposal as he had urged the world community to celebrate yoga for health and wellbeing. During the UN General Assembly on December 11, 2014 a resolution was passed and it was declared that June 21st would now on, be recognized as International Yoga day. It was approved by 177 member countries. Thus, June 21st 2015 was a much awaited mega event for the world to celebrate the ancient discipline of Yoga on an international level.

**Events and celebration on Y-day**

On Sunday morning at Rajpat, Delhi, it was truly inspiring to see our PM NaMo doing yoga session for 35 minutes along with the huge record breaking crowd of 35,985 enthusiastic people. Instantly we all saw pictures on facebook, twitter, instagram and television also. The place where we used to always see only Republic Day program became memorable with yoga participants doing yoga stretching, bending and Asanas along with our PM who encouraged the masses towards the right direction. It was a moment of great pride for all of us to be an Indian. Very truly Rajpat became Yogapat!

**Event in Mumbai**

Though it rained heavily for 2 days it did not dampen the true spirits of the Mumbaikars. People of different age groups young or old, teenagers, families, senior citizens and yoga school students all joined for yoga events held at different locations across Mumbai such as Worli, Kalina, Dadar, Ghatkopar, Kurla etc. Inspite of the rains, the entire length of Queen's necklace from Nariman point to Chowpatty was covered with yoga enthusiasts performing yoga in open air. 'Yoga by the bay' was successful as 150 trained instructors, fitness experts such as Mickey Mehta and Art of Living volunteers guided everyone properly and made it a yogic success.

**Other state's of INDIA**

Kerala, West Bengal, Andhra Pradesh, Madhya Pradesh, Karnataka, Kashmir and many others state's people celebrated yoga day and had yoga sessions in every nook and corner. Army, Navy and Air Force soldiers at Kargil, Ladakh and various other places held yoga sessions. The Indian Navy conducted yoga onboard naval ships as well.

*(contd. pg 15)*



# ಡಾ. ಜಿ.ಎನ್. ಉಪಾಧ್ಯ ಅವರ 'ವಿನೋಧ ಸೌಧದ ಸಾಹಿತಿ ಡುಂಡಿರಾಜ್'

ಮುಂಬಯಿಯಲ್ಲಿ ಕನ್ನಡ ಸಾರಸ್ವತ ಲೋಕದಲ್ಲಿ ತನ್ನ ವಿಶಿಷ್ಟವಾದ ಕಾರ್ಯವೈಖರಿಯಿಂದ ಜನಮನಸೂರೆಗೊಂಡವರು ಡಾ.ಜಿ.ಎನ್.ಉಪಾಧ್ಯ ಅವರು. ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ ಅವರು ಶಿಕ್ಷಣ ತಜ್ಞರಾಗಿ, ಅಭಿಜಿತ್ ಪ್ರಕಾಶನದ ಪ್ರಕಾಶಕರಾಗಿ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದಾರೆ. ಇವರು ಅಧ್ಯಾಪನದೊಂದಿಗೆ ಸದಾ ಅಧ್ಯಯನದಲ್ಲಿ ತೊಡಗಿಕೊಂಡವರು. ಅವರ ಆಳವಾದ ಅಧ್ಯಯನದ ಸಾರವಾಗಿ ಹೊರಬಂದ ಪ್ರತಿಯೊಂದು ಕೃತಿಗಳೂ ಅಮೂಲ್ಯವಾದವುಗಳು.

ಸಣ್ಣ ಪದ್ಯಗಳ ಸರದಾರನೆಂದೇ ಖ್ಯಾತಿವೆತ್ತಿರುವ ಡುಂಡಿರಾಜ್ ಅವರ ಹನಿಕವನಗಳನ್ನು ಮೆಚ್ಚದವರು ಬಹಳ ವಿರಳವೆಂದೇ ಹೇಳಬಹುದು. ಆದರೆ ಅವರನ್ನು ಹತ್ತಿರದಿಂದ ಬಲ್ಲವರು ಬಹಳ ವಿರಳವಾಗಿರಬಹುದು. ಕವಿಯಾಗಿ, ನಾಟಕಕಾರರಾಗಿ, ಅಂಕಣಕಾರರಾಗಿ ಮನೆಮಾತಾದ ಜನಪ್ರಿಯ ಸಾಹಿತಿಯ ಜೀವನ ಸಾಧನೆಯ ಕುರಿತಾದ 'ವಿನೋದ ಸೌಧದ ಸಾಹಿತಿ ಡುಂಡಿರಾಜ್' ಜಿ.ಎನ್.ಉಪಾಧ್ಯ ಅವರ ಅಧ್ಯಯನ ಪೂರ್ಣ ಕೃತಿ ಸಾರಸ್ವತ ಲೋಕಕ್ಕೆ ಒಂದು ಮಹತ್ವದ ಕೊಡುಗೆಯಾಗಿದೆ.

ಡಾ. ಜಿ.ಎನ್.ಉಪಾಧ್ಯ ಅವರು ರಚಿಸಿರುವ ಈ ಕೃತಿ ಅಂಕಿತ ಪ್ರಕಾಶನದ 60ನೆಯ ಕುಸುಮವಾಗಿ ಅರಳಿರುವುದು ಮುಂಬಯಿ ಕನ್ನಡಿಗರಿಗೆ ಹೆಮ್ಮೆಯ ಅಂಶ. ಕನ್ನಡದ ಹಾಸ್ಯ ಸಾಹಿತ್ಯದ ಪರಂಪರೆಯನ್ನು ಅವಲೋಕಿಸಿದಾಗ ಡುಂಡಿರಾಜರ ಸಾಧನೆ ಒಂದು ಅಸಾಧಾರಣ ಮೈಲಿಗಲ್ಲು. ಅವರ ಜೀವನ ಸಾಧನೆಯ ಬಗ್ಗೆ ಕೂಲಂಕುಷವಾಗಿ ಅಧ್ಯಯನ ನಡೆಸಿರುವ ಡಾ.ಉಪಾಧ್ಯ ಅವರು "ನಗೆಯನ್ನು ಹಿಡಿದು ಅದರ ನಾನಾ ಬಗೆಯನ್ನು ತೆರೆದು ತೋರಿದ ಕವಿಗಳಲ್ಲಿ ಎಚ್.ಡುಂಡಿರಾಜ್ ಅವರು ನಗೆಯ ಉಗಿಬಂಡಿ" ಎಂದು ಗುರುತಿಸಿರುವುದು ಸರಿಯಾಗಿಯೇ ಇದೆ.

ಒಬ್ಬ ಸಾಹಿತಿ ತನ್ನ ಪಾಡಿಗೆ ತಾನು ಬರೆಯುತ್ತಿರುತ್ತಾನೆ. ಅದನ್ನು ಓದಿ ಗುರುತಿಸಬೇಕಾದವರು ಸಹೃದಯ ಓದುಗರು ಹಾಗೂ ವಿಮರ್ಶಕರು. ಸಣ್ಣ ಪದ್ಯಗಳ ಸರದಾರರಾಗಿರುವ ಎಚ್.ಡುಂಡಿರಾಜರ ಕಾವ್ಯದ ಪ್ರತಿ ಪದ, ಶಬ್ದಗಳು ತೀರ ಪರಿಚಿತರಾಗಿದ್ದರೂ ಅದರೊಳಗೆ ಹುದುಗಿರುವ ಅರ್ಥ ಅಪಾರ. ಸರಳ ಪದಗಳ ಮೂಲಕ ನಗೆಬುಗ್ಗೆಯನ್ನು ಚಿಮ್ಮಿಸಬಲ್ಲ ಸಾಮರ್ಥ್ಯ ಕವಿ ಡುಂಡಿರಾಜ್ ಅವರದು. ಇದನ್ನು ಲೇಖಕರು ಗುರುತಿಸಿರುವುದು ಹೀಗೆ " ಪರಿಚಿತ ಶಬ್ದ, ವಸ್ತುವಿನಲ್ಲೂ ನವೋನ್ಮೇಷವನ್ನು ಕಾಣಿಸುವುದು ಅವರ ಅತಿಶಯತೆ. ಶಬ್ದ ಮುಖವಾಗಿ ಪ್ರತಿಮಾತ್ಮಕವಾಗಿ ಬರೆಯುವ ಅಪೂರ್ವ ಕಲೆ ಅವರಿಗೆ ಲಭಿಸಿದೆ". ಇದು ಡುಂಡಿರಾಜರ ಸರಳತೆಯ ಹಿಂದಿರುವ ಸುಂದರ ಮನಸ್ಸಿಗೆ ಸಾಕ್ಷಿಯಾಗಿದೆ.

ಮೂಲತ: ವಿಜ್ಞಾನಿಯಾಗಿರುವ ಡುಂಡಿರಾಜರು ತನ್ನ ಸುತ್ತಮುತ್ತಲಿನ ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸುವ ಸಾಮರ್ಥ್ಯವುಳ್ಳವರು. ಅವರ ಸಾಹಿತ್ಯದ ಸೂಕ್ಷ್ಮತೆಯನ್ನು, ಅದು ಗದ್ಯ ಪದ್ಯದಲ್ಲಿ ವಿಚಾರ ಪರಿಪ್ಲುತವಾಗಿರುವುದನ್ನು ಉಪಾಧ್ಯ ಅವರು ಹಲವು ಉದಾಹರಣೆಗಳ ಮೂಲಕ ಮಂಡಿಸಿದ್ದಾರೆ. ಒಬ್ಬ ಸಾಹಿತಿಯನ್ನು, ಸಾಹಿತ್ಯವನ್ನು ಇತರ ಸಾಹಿತಿಗಳು ಗುರುತಿಸಿ ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡಿದಾಗ ಅದು ಆ ಸಾಹಿತಿಗೆ ದೊರೆಯುವ ನಿಜವಾದ ಗೌರವ, ಪ್ರಶಸ್ತಿ, ಮಾನ, ಸಮ್ಮಾನವಾಗಿರುತ್ತದೆ. ಡುಂಡಿರಾಜರು ಕನ್ನಡ ಸಾಹಿತ್ಯದ ಬಣ್ಣಬನಿಯನ್ನು ಗಾಢಗೊಳಿಸಿದ ನಾ.ಕಸ್ತೂರಿ, ಬೀಚಿ, ಜಿ.ಎಸ್.ಎಸ್, ದಿನಕರ ದೇಸಾಯಿ, ವಿ.ಜಿ.ಭಟ್, ಎನ್.ಎಸ್.ಎಲ್, ಕೆ.ಎಸ್.ನ, ವೈಎನ್‌ಕೆ, ನಿಸಾರ್ ಅಹಮದ್, ಕಾರಂತ, ಕಣವಿ, ಅನಂತಮೂರ್ತಿ, ಪಳಕಳ ಸೀತಾರಾಮ ಭಟ್ಟ, ಅ.ರಾ.ಸೇ, ಕೆ.ವಿ. ಹೀಗೆ ನೂರಾರು ಸಾಹಿತಿಗಳ ನುಡಿ ಚಿತ್ರಗಳನ್ನು ರಚಿಸಿರುವುದನ್ನು ಉಪಾಧ್ಯ ಅವರು ಸೊಗಸಾಗಿ ವಿಶ್ಲೇಷಿಸಿದ್ದಾರೆ.

"ಅಪರೂಪದ ಮತ್ತು ಅನಿರೀಕ್ಷಿತವಾದ ಪ್ರಾಸಗಳು ಮಾತ್ರ ಓದುಗರಿಗೆ ಖುಷಿ ಕೊಡಬಲ್ಲದು. ಕವಿತೆಯಲ್ಲಿ ಪ್ರಾಸಗಳು ಸಹಜವಾಗಿ ಬಂದಂತೆ ಕಾಣಬೇಕೆ ವಿನ: ಪ್ರಾಸಕ್ಕಾಗಿ ಕವಿ ತ್ರಾಸ ಪಟ್ಟಂತೆ ಭಾಸವಾಗಬಾರದು" ಎಂಬ ಡುಂಡಿರಾಜರ ಉಪದೇಶ ಅನೇಕ ಓದುಗರನ್ನು ಕಾಡುತ್ತಿರುವ ಪ್ರಶ್ನೆಗೆ ಉತ್ತರವೂ ಆಗಿದೆ. ಅದನ್ನು ಲೇಖಕರು ಇಲ್ಲಿ ವಸ್ತುನಿಷ್ಠವಾಗಿ ಓದುಗನೆದುರು ತೆರೆದಿಟ್ಟಿದ್ದಾರೆ.

ಡಾ. ಜಿ.ಎನ್.ಉಪಾಧ್ಯ ಅವರು ತಮ್ಮ ವೈವಿಧ್ಯಮಯವಾದ ಬರವಣಿಗೆಯಿಂದ ಮಹಾರಾಷ್ಟ್ರ ಮಾತ್ರವಲ್ಲ ಕರ್ನಾಟಕಾದ್ಯಂತ ಜನಪ್ರಿಯರಾದವರು. ಅವರಲ್ಲಿ ಹಿರಿಯರ ಬರವಣಿಗೆಯನ್ನು ಆದರಿಸಿ ವಿಶ್ಲೇಷಿಸುವ ಹಾಗೂ ಕಿರಿಯರನ್ನು ಪ್ರೋತ್ಸಾಹಿಸುವ ದೊಡ್ಡ ಗುಣವಿದೆ. ಒಬ್ಬ ವ್ಯಕ್ತಿಯನ್ನು ನಾವು ಸರಿಯಾಗಿ ಅರಿಯಬೇಕಾದರೆ ವಸ್ತುನಿಷ್ಠವಾಗಿ ಹಾಗೂ ಪ್ರಾಂಜಲ ಮನಸ್ಸಿನಿಂದ ಅವರೊಂದಿಗೆ ಸಂಭಾಷಣೆ ನಡೆಸಬೇಕು. ಅವರ ಜೀವನದ ಕೆಲವು ಕುತೂಹಲಕರ ವಿಷಯಗಳನ್ನು ಇತರ ಓದುಗರಿಗೆ ಮುಟ್ಟಿಸುವುದು ಅಷ್ಟೊಂದು ಸುಲಭವಲ್ಲ. ಡಾ.ಜಿ.ಎನ್.ಉಪಾಧ್ಯ ಹಾಗೂ ಡುಂಡಿರಾಜರ ನಡುವಿನ ಆತ್ಮೀಯ ಸಂದರ್ಶನವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅದರ ಸಾರ 'ಮಾತು ಮಥಿಸಿ ಬಂದಾಗ ಜೀವನದ ಕಥೆಯಾಗಿ ಮಾರ್ಪಡುತ್ತದೆ' ಎನ್ನುವುದಕ್ಕೆ ಜ್ವಲಂತ ಸಾಕ್ಷಿಯಾಗಿ ಮೂಡಿಬಂದಿದೆ. ಅಂತಹ ಆತ್ಮೀಯ ಸ್ಪಂದನ ಅಲ್ಲಿದೆ.

ಬದಲಾಗುತ್ತಿರುವ ಜೀವನ ಶೈಲಿ, ಮೌಲ್ಯಗಳಿಂದಾಗಿ ಸಾಹಿತ್ಯ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿದೆಯೇನೋ ಎಂದು ಆತಂಕ ವ್ಯಕ್ತಪಡಿಸಿರುವ ಡುಂಡಿರಾಜರು 'ಭೋಗ ಸಂಸ್ಕೃತಿಯ ವ್ಯಾಮೋಹವನ್ನು ಮೀರಿ, ನಾವು ಮತ್ತೆ ಸಾಹಿತ್ಯದ ಕಡೆ ಆಕರ್ಷಿತರಾಗುವಂತಹ ಬರವಣಿಗೆ ಬರಬೇಕಾಗಿದೆ' ಎಂಬ ಕಳಕಳಿ ಎಲ್ಲರೂ ಗಮನಿಸಬೇಕಾದ ಅಂಶವಾಗಿದೆ. ಉಪಾಧ್ಯ ಅವರ ಸಂದರ್ಭೋಚಿತ ಪ್ರಶ್ನೆಗಳು ಅದಕ್ಕೆ ದೊರೆತ ಪಾರದರ್ಶಕ ಉತ್ತರಗಳು ಡುಂಡಿರಾಜರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಸಣ್ಣ ಪದ್ಯಗಳ ದೊಡ್ಡ ಸರದಾರನ ಸಾಹಿತ್ಯವನ್ನು ಮೆಚ್ಚಿಕೊಂಡಿರುವ ಡಾ. ಜಿ. ಎನ್. ಉಪಾಧ್ಯ ಅವರು ಡುಂಡಿರಾಜರ ಅಪರೂಪದ ಪ್ರಾಸಬದ್ಧ ಸಾಲುಗಳಲ್ಲಿ ನವಿರಾದ ಹಾಸ್ಯದೊಂದಿಗೆ ವೈಚಾರಿಕತೆ, ಸಾಮಾಜಿಕ ಪ್ರಜ್ಞೆ ಮೂಡಿ ಬಂದಿರುವುದನ್ನು ಕಟ್ಟಿಕೊಟ್ಟಿದ್ದಾರೆ. ಕಬ್ಬಿನಿಂದ ರಸ ತೆಗೆದಂತೆ ಭಾಷೆಯನ್ನು ಮುರಿದು ಕಟ್ಟಿ ಹಾಸ್ಯವನ್ನು ಹೊರಹೊಮ್ಮಿಸುವ ಅವರ ಸಾಹಿತ್ಯದ ಸವ್ಯಸಾಚಿತ್ಯವನ್ನು ಹೃದ್ಯವಾಗಿ ಗುರುತಿಸಿದ್ದಾರೆ. ಸಾಮಾನ್ಯ ಜನರು ಡುಂಡಿರಾಜರ ಕವನಗಳನ್ನು ಹಾಸ್ಯದ ಅಭಿವ್ಯಕ್ತಿಯಾಗಿ, ಚುಟುಕು ಕವನವಾಗಿ ಮಾತ್ರ ಗುರುತಿಸಿದರೆ ಇಲ್ಲಿ ಲೇಖಕರು ಅವರ ಹನಿಗವನಗಳಿಗೆ ಕಾವ್ಯಮೀಮಾಂಸೆ, ರಾಜಕೀಯ ವಿಶ್ಲೇಷಣೆ, ಸಮಾಜ–ಸಂಸ್ಕೃತಿ ಚಿಂತನೆ, ನಾಡುನುಡಿಯ ಬಣ್ಣನೆ, ಪುರಾಣಗಳ ಮರುಸೃಷ್ಟಿ, ಹಾಸ್ಯದ ಹೊನಲು, ಹೀಗೆ ವಿಭಿನ್ನ ನೆಲೆಗಳಲ್ಲಿ ವಿವೇಚಿಸಿರುವುದು ಅವರ ಚಿಕಿತ್ಸಕ ದೃಷ್ಟಿಗೆ ಹಾಗೂ ಓದಿನ ಸೂಕ್ಷ್ಮತೆಗೆ ಸಾಕ್ಷಿಯಾಗಿದೆ.

ಉತ್ತಮ ನಟರಾಗಿರುವ ಡುಂಡಿರಾಜರು ರಂಗಭೂಮಿಯ ಹಿನ್ನೆಲೆಯನ್ನು ಬಲ್ಲವರು. ಅವರು ಯಶಸ್ವೀ ನಾಟಕಕಾರರಾಗಿದ್ದು ಉಪಾಧ್ಯ ಅವರು ಡುಂಡಿರಾಜರ ನಾಟಕಗಳಲ್ಲಿ ಹಾಸ್ಯ ಪ್ರಜ್ಞೆ, ವ್ಯಂಗ್ಯ ದೃಷ್ಟಿ, ವಿಚಾರಪರತೆ ಹಾಗೂ ತೀವ್ರ ಭಾವಾನಾಮಯತೆಯನ್ನು ಗುರುತಿಸಿದ್ದಾರೆ. ಅಜ್ಜಿಕಥೆ, ಕಾಯೋ–ಕಲ್ಪ, ಹುಡುಕಾಟ, ಅಧ್ವಾನಪುರ, ನಾಳೆಬನ್ನಿ, ಕೊರಿಯಪ್ಪನ ಕೊರಿಯೋಗ್ರಫಿ ಮೊದಲಾದವುಗಳು ನವಿರಾದ ಹಾಸ್ಯ, ಸಾಮಾಜಿಕ ವಿಡಂಬನೆ, ಮನರಂಜನೆ, ವೈಚಾರಿಕತೆ, ನವಿರಾದ ನಾಟ್ಯ ಗುಣವುಳ್ಳ ರಂಗಗೀತೆಗಳಿಂದ ಕೂಡಿದೆ. ಇವರ ನಾಟಕಗಳು ಸಮಕಾಲೀನ ತವಕ ತಲ್ಲಣಗಳಿಗೆ ಸ್ಪಂದಿಸುವ ವಿಡಂಬನಾತ್ಮಕ ನಾಟಕಗಳ ಮೂಲಕ ಹೊಸ ಹೆಜ್ಜೆ ಗುರುತುಗಳನ್ನು ಮೂಡಿಸಿರುವುದನ್ನು ಉಪಾಧ್ಯ ಅವರು ಉಲ್ಲೇಖಿಸಿದ್ದಾರೆ.

ಒಟ್ಟಿನಲ್ಲಿ ಡುಂಡಿರಾಜರು ಹಾಸ್ಯದ ಹೊನಲನ್ನು ಹರಿಸುತ್ತಾ ಕಾವ್ಯ, ಚುಟುಕು, ನಾಟಕ, ಪ್ರಬಂಧ, ವ್ಯಕ್ತಿಚಿತ್ರಗಳು, ಶಿಶು ಸಾಹಿತ್ಯ, ಪ್ರವಾಸ ಕಥನಗಳನ್ನು ರಚಿಸಿ ಅವುಗಳಲ್ಲಿ ಜೀವ ಚೈತನ್ಯವನ್ನು ತುಂಬಿ ಕನ್ನಡ ಸಹೃದಯರ ಮನಸೂರೆಗೊಂಡ ಪ್ರತಿಭಾವಂತ ಲೇಖಕ ಎನ್ನುವುದನ್ನು ಉಪಾಧ್ಯ ಅವರು ಸರಿಯಾಗಿಯೇ ಗುರುತಿಸಿದ್ದಾರೆ. ಡುಂಡಿರಾಜರ ಜೀವನ ಸಾಧನೆಯನ್ನು ಒಳಗೊಂಡ 'ವಿನೋದ ಸೌಧದ ಸಾಹಿತಿ ಡುಂಡಿರಾಜ್' ಡುಂಡಿರಾಜರ ವ್ಯಕ್ತಿತ್ವದ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವ ಕೃತಿ.

**– ಡಾ. ಪೂರ್ಣಿಮಾ ಶೆಟ್ಟಿ**

# ತಿದ್ದುಪಡಿ



ಗೀತಾ ವಿಶ್ವನಾಥ್‌ರವರು ನಿರ್ದೇಶಿಸಿದ ಸೂತ್ರದ ಗೊಂಬೆ ನಾಟಕದ ಒಂದು ದೃಶ್ಯ



ಗೀತಾ ವಿಶ್ವನಾಥ್‌ರವರು ನಿರ್ದೇಶಿಸಿದ 'ಮುದ್ರಾರಾಕ್ಷಸ' ನಾಟಕದ ಒಂದು ದೃಶ್ಯ



ಗೀತಾ ವಿಶ್ವನಾಥ್‌ರವರ ಮಗಳು ಅಭಿನಯಿಸಿದ 'ಬಿಸಿಲ್ಗುದುರೆ' ನಾಟಕದ ಒಂದು ದೃಶ್ಯ

ಕಳೆದ ತಿಂಗಳ ಜೂನ್ 2015ರ ನೇಸರುವಿನಲ್ಲಿ ಪ್ರಕಟವಾದ ಡಾ. ಮಂಜುನಾಥ್‌ರವರ 'ನಾ ಕಂಡ ಶ್ರೀಮತಿ ಗೀತಾ ವಿಶ್ವನಾಥ್' ಲೇಖನದಲ್ಲಿ ಕೆಲವು ಅಚಾತುರ್ಯದ ತಪ್ಪುಗಳಿದ್ದವು. ಮುಖ್ಯವಾಗಿ ಫೋಟೋ ಮತ್ತು ಶೀರ್ಷಿಕೆಗಳು ಅದಲು ಬದಲಾಗಿದ್ದವು ಮತ್ತು ಅವರ ಮಾವನರಾದ ಶ್ರೀ ವರದ್‌ರಾಜನ್‌ನವರು ACC ಕಂಪೆನಿಯ ಮ್ಯಾನೆಜಿಂಗ್ ಡೈರೆಕ್ಟರ್ ಆಗಿದ್ದರು ಎಂದು ಅಚ್ಚಾಗಿದೆ. ಅದು ACC ಅಲ್ಲ HCC ಎಂದಾಗಬೇಕಾತ್ತು. ಅವರ ಪ್ರಕಟಿತ ಕೃತಿಯ ಹೆಸರು 'ಎಲೆಮರೆಯ ಹಣ್ಣುಗಳು' ಎಂದು ಬರಬೇಕಿತ್ತು.

– ಸಂ.





ಫೆಬ್ರವರಿ 2015ರ ನೇಸರುವಿನಲ್ಲಿ ಪ್ರಕಟವಾದ ಡಾ. ಮಂಜುನಾಥ್‌ರವರ 'ಬಿ.ವಿ.ಎಸ್. ಅಯ್ಯಂಗಾರ್' ಲೇಖನದಲ್ಲಿ ಕೆಲವು ಸ್ಮೃತಿ ಚಿತ್ರಗಳು ತಪ್ಪಾಗಿದ್ದವು. ಈಗ ಅವರ ಮನೆಯವರೇ ಕಳುಹಿಸಿ ಕೊಟ್ಟ ಚಿತ್ರಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

# ಹೊಸದೃಷ್ಟಿ, ನೂತನ ಸೃಷ್ಟಿಯೇ ಸಂಶೋಧನೆ- ಡಾ. ಎಸ್. ಎಂ. ಹಿರೇಮಠ

'ಬಹಳ ಜನ ವಿದ್ವಾಂಸರು, ಸಾಹಿತ್ಯಾಸಕ್ತರು ಸಂಶೊಧನೆ ಎಂಬುದು ಅನಾಕರ್ಷಕ ಕ್ಷೇತ್ರವೆಂದು ಭಾವಿಸಿರುವುದು ಸರಿಯಲ್ಲ. ಸಂಶೋಧನೆ ಎಂಬುದು ಯಾವುದೇ ಜ್ಞಾನಶಾಖೆಯನ್ನು ಬೆಳೆಸುವ ಮಹತ್ವದ ಕ್ರಿಯೆಯಾಗಿದೆ. ಸತ್ಯದ ಪ್ರಾಮಾಣಿಕ ದರ್ಶನ ಮಾಡಿಸುವುದೇ ಸಂಶೋಧನೆಯ ಅತ್ಯಂತಿಕ ಧ್ಯೇಯವಾಗಿದೆ. ಜನತೆಯ ಚಿಂತನ ಕ್ರಮವನ್ನು ಬದಲಿಸಲು ಸಂಶೋಧನೆ ಸಹಕಾರಿಯಾಗಿದೆ. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮಿತ್ರರು ಬಹು ಭಾಷಿಕ ನೆಲೆಯಲ್ಲಿ ತೌಲನಿಕ ಅಧ್ಯಯನ ಮಾಡಿ ಕೃತಿ ರೂಪದಲ್ಲಿ ಹೊರ ತಂದಿರುವುದು ಅಭಿಮಾನದ ಸಂಗತಿ' ಎಂದು ಹಿರಿಯ ಸಂಶೋದಕ, ಗುಲ್ಬರ್ಗ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕ ಡಾ। ಎಸ್.ಎಂ. ಹಿರೇಮಠ ನುಡಿದರು.




ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಇತ್ತೀಚೆಗೆ ಸಾಂತಾಕ್ರೂಜ್ ಪೂರ್ವದ ಕಲೀನಾ ಕ್ಯಾಂಪಸ್‌ನ ಜೆ.ಪಿ ನಾಯಕ್ ಸಭಾಗೃಹದಲ್ಲಿ ಆಯೋಜಿಸಿದ್ದ 'ಸಂಶೋಧನೆಗಳ ಇತಿಮಿತಿಗಳು' ವಿಚಾರಿತ ಕನ್ನಡ ಸಂಶೋಧನೆಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ ಡಾ। ಹಿರೇಮಠ ಮಾತನಾಡಿದರು.

ಅಂತರ್ ದೃಷ್ಟಿಯ ಕ್ರಿಯಾ ವಿಶೇಷವೇ ಸಂಶೋಧನೆ. ಇದರ ವ್ಯಾಪ್ತಿಯನ್ನು ತಿಳಿದಷ್ಟೂ ಕಡಿವೆ. ಸಂಶೋಧನೆಯು ಸಮಾಜಕ್ಕೆ ಹಿತವಾದ ಶೋಧನೆಯನ್ನು ನೀಡಬೇಕು. ಸಮಾಜದ ಹದೆಗೆಟ್ಟುವಿಕೆ ಸಂಶೋಧನೆಯಲ್ಲ, ಹೊಸದೃಷ್ಟಿ, ನೂತನ ಸೃಷ್ಟಿಯೇ ಸಂಶೋಧನೆ. ಇದು ಅಹಂಭಾವನೆ ಕ್ರಿಯೆಯಲ್ಲ. ಆಳ ಮತ್ತು ವ್ಯಾಪಕದ ದೃಷ್ಟಿಯಿಂದ ಸಂಶೋಧನೆ ಸಾಧ್ಯ ಎನ್ನುತ್ತಾ ಮುಂಬಯಿ ಕನ್ನಡ ವಿಭಾಗದಲ್ಲಿ ಕನ್ನಡದ ಪವಾಡಗಳೇ ನಡೆಯುತ್ತಿದೆ. ಇದರ ರೂವಾರಿ ಡಾ। ಜಿ.ಎನ್. ಉಪಾಧ್ಯರು ಎಂದು ಮುಂಬಯಿ ಕನ್ನಡ ವಿಭಾಗದ ಸಾಧನೆಯನ್ನು ಹಿರೇಮಠ ಕೊಂಡಾಡಿದರು.

ಮುಂಬಯಿ ವಿವಿ ಕನ್ನಡ ವಿಭಾಗದ ಮುಖ್ಯಸ್ಥ ಡಾ। ಜಿ.ಎನ್. ಉಪಾಧ್ಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಡಾ। ಹಿರೇಮಠ ಅವರು ನಾಡಿನ ಹಿರಿಯ ಸಂಶೋಧಕರು. ಅವರದು ಬಹುಮುಖ ಪ್ರತಿಭೆ. ಕವಿಯಾಗಿ, ನಾಟಕಕಾರರಾಗಿ ಸೃಜನ ಕ್ಷೇತ್ರದಲ್ಲಿ ಮಿಂಚಿದವರು. ರಂಗಭೂಮಿ ಬೆಳ್ಳಿತೆರೆಯಲ್ಲಿ ಕೆಲಸ ಮಾಡಿದವರು. ಹೀಗಿದ್ದೂ ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಅವರು ಅಪಾರವಾದ ಕೃಷಿಗೈದವರು. ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಮಂಡಳಿಯ ವಿಷಯ ತಜ್ಞರಾಗಿ ಹಿರೇಮಠ ಅವರು ಮಾರ್ಗ ದರ್ಶನ ಮಾಡುತ್ತಾ ಬಂದಿದ್ದಾರೆ. ವಿಭಾಗದ ಉನ್ನತಿಯಲ್ಲಿ ಅವರ ಪರಿಶ್ರಮವೂ ಇದೆ. ಇಂತಹ ಒಬ್ಬ ಸಕ್ರಿಯ ಸಂಶೋಧಕ, ಲೇಖಕ ಸಂಶೋಧನಾ ಮಂಡಳಿಯಲ್ಲಿರುವುದು ಹೆಮ್ಮೆಯ ವಿಚಾರ. ಅವರ ಸಾಧನೆ ಎಲ್ಲರಿಗೂ ಮಾದರಿಯಾಗಿದೆ ಎಂದರು. ಕನ್ನಡದ ಬಲವರ್ಧನೆಗೆ ನಮ್ಮ ವಿಭಾಗ ಶ್ರಮಿಸುತ್ತಿದೆ. ಮುಖಾಮುಖಿಯಿಂದ ವಿದ್ವತ್ತನ್ನು ಹಂಚಿಕೊಳ್ಳುತ್ತಿದ್ದೇವೆ ಎಂದರು. ಬಳಿಕ ಮುಂಬಯಿ ವಿವಿ ಪರವಾಗಿ ಡಾ। ಹಿರೇಮಠ ಅವರನ್ನು ಗೌರವ ಪುರಸ್ಕಾರ ನೀಡಿ ಶಾಲು ಹೊದಿಸಿ ಸನ್ಮಾನಿಸಿದರು ಹಾಗೂ ಮುಂಬಯಿ ವಿಶ್ವವಿದ್ಯಾಲಯಕ್ಕೆ ನೂತನವಾಗಿ ನೇಮಕಗೊಂಡ ಉಪಕುಲಪತಿ ಡಾ। ಸಂಜಯ್ ದೇಶ್‌ಮುಖ್ ಅವರನ್ನು ಅಭಿನಂದಿಸಿದರು.

– ವರದಿ : ಕನ್ನಡ ವಿಭಾಗ ಮು.ವಿ.ವಿ.

---

# INTERNATIONAL YOGA DAY...

## Around the world

*(contd. from pg 12)*

France, China, United Kingdom, United States of America and many more countries participated in the celebrations of International Yoga day. Yoga savvy people gathered to take part and celebrated the International yoga day. India's ancient heritage of Yoga truly brought the world together in perfect harmony and togetherness.

## At Mysore association

On June 21st morning while going to Mysore Association, I saw many families and young kids coming back home after attending yoga with yoga mats on their shoulders and carrying umbrella with them. There was happiness and joy seen on their faces. Unity and oneness was seen on this day.

## My experience on International Yoga Day

Anything we do, whether yoga, dance, music, sports, drama or learn instrumental music etc., discipline is must for the individual. A person puts hours of hard work to achieve that perfection. Dance which is also a form of yoga i.e. Nritya Yoga also requires strict discipline, hard work and dedication to learn the Laya, Bhava and Thala, after which only an individual becomes a renowned dancer. Yoga creates happiness, peace, disciplined breathing and purifies the mind.

## After effects of International Yoga Day

After International yoga day event which was not only national but an international success, the government has come up with certification of yoga teachers where the examiners will test the knowledge of the applicant who aspires to become a yoga teacher.

National Council of Educational Research and Training has brought out text books such as Yoga- A healthy way of living, which has information related to Yoga Asanas, Pranayamas, Kriyas and Meditation with postures and steps for easy practice.

The state government is planning to incorporate yoga in school syllabus which will help to inculcate the wonderful knowledge of Yoga in the future generation of India from a very young age. This will help the next generation to tackle the latest evils of stress and health issues.

The future generation of India will act as shining torch for the other people of the world and lead mankind into a glorious age of peace, harmony and respect to nature.

-sent by

**- Poornima R. Nayak**

Date of Publication : 10th of every month RNI No. 040015 / 83
MNE / 93 / 2015-17 Date of Posting: 10/11th of every month at Mumbai
Patrika Channel Sorting Office G.P.O.

# World record for classical Music



Kum. Akshata Rajendra is the daughter of Mysore Association Members, Shri Rajendra & Smt. Rohini. Shri Rajendra is the second son of the wellknown cinematographer & our past memeber Late C. Puttaniah.

Kum. Akshata Rajendra, former student of Swami Vikvekanand High School in Mumbai is a Bharatnatyam dancer and music enthusiast. Her love for music has earned her several awards at music competitions in Mumbai. Now moved to Bangalore, this class VIII student in Bangaluru International Public School has joined Veena Vani School of Music. This organization recognized her music talent and gave her an opportunity along with other students to participate in Guinness Book, Limca Book of World Records.

In an event organized on June 28, participants from all age groups played carnatic music using the keyboard, which is a western musical instrument, and created a world record to document a milestone for the heritage of Karnataka and India on the whole. This is the biggest musical event to have entered in the Guinness Book of World Records for the largest ensemble of electronic keyboard category. The music organization has also received the clearance from the United Kingdom's Guinness Book of World Records and participants have become holders of the Guinness World Record certificate.

The aim of this project was to encourage more people to learn to play the keyboard, to showcase that a carnatic classical style music can be played on the keyboard and to create the first world record in carnatic classical music.

## ಮುಂಬರುವ ಕಾರ್ಯಕ್ರಮಗಳು

**09-8-2015** ಒಂದು ದಿನದ ವಿಹಾರ ಕೂಟ ಲೋನಾವಾಲದ ಸಮೀಪದಲ್ಲಿರುವ ಲೋಹಘುಡಕ್ಕೆ.
ಹೆಚ್ಚಿನ ವಿವರಗಳಿಗೆ ಮೈಸೂರು ಅಸೋಸಿಯೇಶನ್ ಕಚೇರಿಯಲ್ಲಿ ಸಂಪರ್ಕಿಸಿರಿ.

**15-8-2015** ಬೆಳಿಗ್ಗೆ 10ಕ್ಕೆ ರಾಷ್ಟ್ರಧ್ವಜವಂದನೆ.
**'ಭಾವ - ಗಾನ - ಯೋಗ'**
ಭೈರವಿ ಆರ್ಟ್ಸ್ ಎಂಡ್ ಡಾನ್ಸ್ ಅಕಾಡೆಮಿ, ಉಡುಪಿ ಇವರಿಂದ ಮಕ್ಕಳ ನೃತ್ಯ ಕಾರ್ಯಕ್ರಮ

## PICNIC IN RAINS

A one day picnic has been arranged to Lohagad (A walk of 3km to Lohagad from Malavli) on **Sunday 09 August 2015**. Interested members can contact Mr. Shashikant Joshi (9820166274) or Mr. Madhusudan, Mysore Assoication Per person is Rs. 700/-. Please confirm your names before **06.08.2015.**

## ಸಂಸ್ಕೃತ ಕಲಿಯುವ ಆಸಕ್ತರಿಗೊಂದು ಸುವರ್ಣಾವಕಾಶ

**ವಿದ್ಯಾರ್ಹತೆ :** ಎಸ್.ಎಸ್.ಎಲ್.ಸಿ., ಪಿ.ಯು.ಸಿ., ಬಿ.ಎ., ಬಿ.ಕಾಂ., ಇಂಜಿನಿಯರಿಂಗ್, ಡಿಪ್ಲೋಮಾ, ಎಂ.ಎ. ಸಾಹಿತ್ಯ, ವಿದ್ವತ್ ಹಾಗೂ ಇನ್ನಾವುದೇ ಪದವೀಧರರು. **ವಯೋಮಿತಿ :** 18 ರಿಂದ 60 ವರ್ಷ.
ಆಸಕ್ತರು ತಮ್ಮ ಹೆಸರು, ವಿಳಾಸ, ವಯಸ್ಸು, ವಿದ್ಯಾರ್ಹತೆ ಮತ್ತು ಭಾವಚಿತ್ರದ ಪ್ರತಿಯೊಂದನ್ನು ಜುಲೈ 20ರೊಳಗೆ "ಸಂಯೋಜಕರು" ಸಂಸ್ಕೃತ ಭಾರತಿ. ಅಕ್ಷರಂ, 8ನೇ ಕ್ರಾಸ್, 2ನೇ ಫೇಸ್, ಗಿರಿನಗರ, ಬೆಂಗಳೂರು – 560 085ಕ್ಕೆ ಸಲ್ಲಿಸತಕ್ಕದ್ದು.
ದೂರವಾಣಿ : 8050250829 / 9449851529 / 080–26722576

Edited, Printed & Published by Dr. Jyothi Satish, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938